ಹೊರತು, ಈಗ ನಮಗೆ ಬಹಳ ಜನ ಪರಿಚಯವಾಗಲಿಲ್ಲ, ಖಂಡಿತಾ ಪರಿಚಯವಾಗಲಿಲ್ಲ. ಅವರು ಏನು ಓದಿದರು ಅದು ನಮಗೂ ಗೊತ್ತಿತ್ತು. ಆದುದರಿಂದ ಇದಕ್ಕೋಸ್ಕರ ಒತ್ತಾಯ ಮಾಡುವ ಅವಶ್ಯಕತೆ ಇರಲಿಲ್ಲ ಅದನ್ನು ಬಿಟ್ಟುಬಿಡೋಣ. ಸ್ವಾಮಿ, ತಮ್ಮಲ್ಲಿ ಇವತ್ತು ಒಂದು ಬಹಳ ಅತ್ಯಂತ ಪ್ರಾಮುಖ್ಯವಾಗಿರತಕ್ಕಂಥ ವಿಚಾರವೇನೆಂದರೆ ನಾವು ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ವಿದ್ಯುಚ್ಛಕ್ತಿಯ ಬಗ್ಗೆ ಮತ್ತು ಕೇಂದ್ರ ಸರ್ಕಾರ ಪೆಟ್ರೋಲ್ ಡಿಸೇಲ್, ಅನಿಲ ಅವೆಲ್ಲದರ ಬೆಲೆಯನ್ನು ಹೆಚ್ಚಿಗೆ ಮಾಡಿದ್ದಾರೆ. ಇದರ ವಿರುದ್ಧ ನಾವು ರಾಜ್ಯಾದ್ಯಂತ ತೀವ್ರವಾಗಿ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ, ಬಿ.ಜೆ.ಪಿ.ಯವರು ಮೂರನೆಯ ತಾರೀಖಿನಂದು ಬಂದ್ ಆಚರಿಸಿದ್ದರೆ. ಹಾಗೆ ಹದಿನೈದನೇ ತಾರೀಖಿನಂದು ಎಲ್ಲಾ ಸರ್ವಪಕ್ಷದವರು ಬಂದ್ ಆಚರಿಸುತ್ತಿದ್ದಾರೆ. ಇದೆಲ್ಲಾ ಇನ್ನೂ ಅನೇಕ ವಿಚಾರಗಳಿವೆ. ಸರ್ಕಾರ ಏಕಾಏಕಿ ಶಾಸನ ಸಭೆಯನ್ನು ಮುಂದಿಟ್ಟುಕೊಂಡು ಅದನ್ನು ಏರಿಸಿ ಇರುವುದು ಇದೆಲ್ಲಾ ಚರ್ಚೆಯಾಗಬೇಕಾಗಿದೆ. ಆದುದರಿಂದ ತಮ್ಮಲ್ಲಿ ನಾವು ಏನು ಅರಿಕೆ ಮಾಡಿಕೊಳ್ಳುತ್ತೇವೆಂದರೆ, ಈ ಒಂದು ಪ್ರಶ್ನೋತ್ತರ ಕಾಲವನ್ನು ರದ್ದು ಪಡಿಸಿ ಈ ಚರ್ಚೆಯನ್ನೇ ನೇರವಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ಸ್ವಾಮಿ.

3) ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ:

ವಿಷಯ: ವಿದ್ಯುತ್ ದರ, ಪೆಟ್ರೋಲ್, ಡೀಸೆಲ್ ಅನಿಲ ಇವೆಲ್ಲವುಗಳ ಬೆಲೆಯನ್ನು ಹೆಚ್ಚಿಸಿರುವುದು.

★ **ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್):-** ನಾವು ಕೂಡ ಇದರ ಬಗ್ಗೆ ಒಂದು ನಿಲುವಳಿಸೂಚನೆಯನ್ನು ನಿನ್ನೆ ಕಳುಹಿಸಿದ್ದೇವೆ. ಈ ವಿದ್ಯುಚ್ಛಕ್ತಿ ದರವನ್ನು ಏನು ಹೆಚ್ಚಿಸಿದ್ದಾರೆ ಇದನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಕೇಳಿದ್ದೇವೆ. ಬಹಶ: ತಾವು ಇದನ್ನು ಪ್ರಶ್ನೋತ್ತರ ವೇಳೆ ಆದ ಮೇಲೆ ತೆಗೆದುಕೊಳ್ಳುತ್ತೀರೆನ್ನುವ ವಿಶ್ವಾಸವಂತು ನಮಗಿದೆ. ಏಕೆಂದರೆ ಈ ವಿಷಯದ ಗಹನತೆಯನ್ನು ಅರಿತುಕೊಂಡರೆ, ಇದರ ಶಕೆ ಜಾಸ್ತಿ ಯಾರಿಗೆ ಬಡಿಯಿತು ಎಂದರೆ, ನಮ್ಮ ಕೋಲಾರ ಜಿಲ್ಲೆಗೆಯವರಿಗೆ ಏಕೆಂದರೆ, ಅಲ್ಲಿರತಕ್ಕಂಥ ರೈತರು ಬಳಕೆ ಮಾಡುವಂತಹ ವಿದ್ಯುತ್ ಪಂಪ್‌ಸೆಟ್ ಗಳಿಂದ ಅಂಡರ್‌ಗ್ರೌಂಡ್ ವಾಟರ್ ಅನ್ನು ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥದ್ದು ಹೆಚ್ಚಿನ ಪಂಪ್‌ಸೆಟ್ಟುಗಳು ಇರತಕ್ಕಂಥ ಜಿಲ್ಲೆ ಯಾವುದೆಂದರೆ, ಅದು ನಮ್ಮ ಕೋಲಾರ ಜಿಲ್ಲೆ. ಆದ್ದರಿಂದಲೇ ಅಧ್ಯಕ್ಷರೆ, ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಿ ಬೇಕಾದರೆ ಮಧ್ಯಾಹ್ನದ ಮೇಲೆ ಈ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಈಗ ಇದು ಮಹತ್ವವಿರುವ ಕಾರಣ ನೀವು ಇದಕ್ಕೆ ಸ್ವಲ್ಪ ಆದ್ಯತೆ ಕೊಟ್ಟು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾವು ಕೂಡ ಅನೇಕ ಪ್ರಶ್ನೆಗಳನ್ನು ಕೇಳುವುದಕ್ಕಾಗುತ್ತದೆ. ಕ್ಲಾರಿಫೈ ಮಾಡಿಕೊಳ್ಳುವುದಕ್ಕಾಗುತ್ತದೆ. ಯಾವ ದೃಷ್ಟಿಯಿಂದ ಅವರು ಹೆಚ್ಚಿಸಿದರು. ಯಾವ ಕಾರಣಕ್ಕಾಗಿ ಮಾಡಿದರು, ಏನು ಅಂತಹ ಒತ್ತಡ ಬಂತು, ಅವರಿಗೆ ಸಮಯ ಇರಲಿಲ್ಲವೇ ಎನ್ನತಕ್ಕಂಥದ್ದನ್ನು ನಾವು ನೋಡಬೇಕು. ಏಕೆಂದರೆ, ನಾವು ಸುಮ್ಮನೆ ಮನಸ್ಸು ಬಂದಾಗ ಏರಿಸುವುದು, ಆಮೇಲೆ ಇದಾಯಿತು ನಾವು ಮಾಡಿದ್ದೇವೆ. ಏನು ಮಾಡಿಕೊಳ್ಳುತ್ತಿರೋ ಮಾಡಿಕೊಳ್ಳಿ ಎಂದು ಅವರು ಹೇಳುವುದು. ಹಳ್ಳಿಯಿಂದ ದಿಲ್ಲಿಯವರೆಗೆ ನಿಮ್ಮ ಸರ್ಕಾರವಿದ್ದರೆ ಇಲ್ಲಿ ನೀವು ವಿದ್ಯುಚ್ಛಕ್ತಿಯ ದರವನ್ನು ಏರಿಸುತ್ತೀರಿ, ದಿಲ್ಲಿಯಲ್ಲಿ ಅವರು ಪೆಟ್ರೋಲ್ ದರವನ್ನು ಏರಿಸಿಬಿಟ್ಟರು, ಮಾತನಾಡಿಕೊಂಡು ಏರಿಸುತ್ತಿರೇನೋ

ಗೊತ್ತಾಗಲಿಲ್ಲ, ಅದಕ್ಕಾಗಿ ಅಧ್ಯಕ್ಷರೆ, ಇದನ್ನು ತಾವು ಬದಿಗಿಡಿ, ಅವರು ಒಪ್ಪುತ್ತಾರೆ.

MR.SPEAKER:- What I say is, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ವಿರೋಧ ಪಕ್ಷದ ನಾಯಕರು, ತಾವ್ಯಾರೂ ಸದನಕ್ಕೆ ಹೊಸಬರಲ್ಲ, ಅವರು ಹೋಗಬಹುದು, ತಾವು ಹೋಗಬಹುದು ಅದುಬೇರೆ ಪ್ರಶ್ನೆ. ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ತಾವೆಲ್ಲರೂ ಕೂಡ ನನ್ನ ಕಛೇರಿಗೆ ಮನವಿ ಮಾಡಿಕೊಂಡಿದ್ದೀರಿ. ನಮ್ಮ ನಿಯಮಾವಳಿಗಳ ಪ್ರಕಘರ ನಿಲುವಳಿ ಸೂಚನೆಯನ್ನು ನಾವು ಪ್ರಶ್ನೋತ್ತರ ವೇಳೆ ಆದ ನಂತರ ತೆಗೆದುಕೊಳ್ಳಬೇಕಾಗಿತ್ತು. ನೀವೇ ಕೊಟ್ಟಿರತಕ್ಕಂಥ ನೋಟಿಸ್, ನಾನು ಕೊಟ್ಟಿರತಕ್ಕಂಥದ್ದಲ್ಲ. ನೀವೇ ನಿಲುವಳಿ ಸೂಚನೆಯನ್ನು ನಿಯಮ 60, 61 ರ ಪ್ರಕಾರ ತೆಗೆದುಕೊಳ್ಳಿ ಎಂದು ಕೊಟ್ಟಿದ್ದೀರಿ. ಇದನ್ನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ನಾನು ಏನು ಹೇಳುತ್ತೇನೆಂದರೆ, ಪ್ರಶ್ನೋತ್ತರ ಆದ ಮೇಲೆ ವಿಷಯ ಗಹನವಾಗಿದ್ದರೂ ಕೂಡ, ನನಗೂ ಕೂಡ ತೆಗೆದುಕೊಳ್ಳುವುದು ಅಥವಾ ಕುತೂಹಲವಿದೆ. ಪ್ರಶ್ನೋತ್ತರವನ್ನು ಬದಿಗಿಟ್ಟು ಇದನ್ನು ತೆಗೆದುಕೊಳ್ಳುವುದು ಅಥವಾ ಒಂದು ಗಂಟೆಗೆ ಎಲ್ಲಾ ಪ್ರಶ್ನೋತ್ತರ ಆದ ಮೇಲೆ, ಎಲ್ಲಾ ಸದಸ್ಯರಿಗೂ ಅವಕಾಶ ಕೊಟ್ಟು ಆಮೇಲೆ ತೆಗೆದುಕೊಳ್ಳುವದರಿಂದ, ಇದರಲ್ಲಿ ಏನಾದರೂ ದೊಡ್ಡ ವಿಷಯ ಇದೆಯೇ.....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ವಿಷಯ ಮಹತ್ವದ್ದು ಇದ್ದ ಕಾರಣ ಇಷ್ಟೊಂದು ಒತ್ತಾಯ ಮಾಡುತ್ತಿದ್ದೇವೆ. ಅಧ್ಯಕ್ಷರೇ, ಇಲ್ಲಿ ನಾವು ನಿಮ್ಮ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಬೇಕು, ನಿಮ್ಮ ಆದೇಶವನ್ನು ಧಿಕ್ಕರಿಸಬೇಕು ಅಥವಾ ಉಲ್ಲಂಘನೆ ಮಾಡಬೇಕು ಎನ್ನತಕ್ಕಂಥಾದ್ದು ನಮ್ಮ ಭಾವನೆಯಲ್ಲ.

ಅಧ್ಯಕ್ಷರು:- ವಿಷಯದ ಮಹತ್ವವನ್ನು ನಾವು ಅಲ್ಲಗಳೆಯುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ತಾವು ಏನು ಹೇಳುತ್ತೀರಿ ಅದನ್ನು ನಾನು ಶಿರಸಾ ವಹಿಸಿ ಕೇಳುತ್ತೇನೆ. ಆದರೆ ವಿಷಯದ ಗಹನತೆ, ವಿಷಯದ ಮಹತ್ವ, ಈ ದೃಷ್ಟಿಯಿಂದ ನಾವು ಇದನ್ನು ಹೇಳುತ್ತಿದ್ದೇನೆಯೇ ಹೊರತು, ನಾವು ಕಾನೂನನ್ನು ಉಲ್ಲಂಘಿಸಬೇಕು ಎಂದಾಗಲೇ, ನಾವೇ ಮಾಡಿದಂಥ ನಿಯಮಗಳನ್ನು ಬದಿಗೊತ್ತಿ ಇವತ್ತಿನ ದಿವಸ ಕಾನೂನನ್ನು ನಮ್ಮ ಕೈಯಲ್ಲಿ ತೆಗೆದುಕೊಂಡು ನಾವು ಇದನ್ನು ಮಾಡಬೇಕು ಎಂದೇನೂ ಇಲ್ಲ. ವಿಷಯ ಬಹಳ ಗಂಭೀರತೆಯಿಂದ ಕೂಡಿದೆ. ಅದನ್ನು ತಿಳಿದುಕೊಂಡೇ ಇವತ್ತು ನಾವು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾನು ಕಳಕಳಿಯಿಂದ ತಮಗೆ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್.ಪಿ.ಜಿಗಜಿಣಗಿ:- ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದಲ್ಲಿರತಕ್ಕಂಥ ಹಿರಿಯ ನಾಯಕರು ವಿಷಯದ ಗಾಂಭೀರ್ಯತೆ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ಪ್ರಶ್ನೋತ್ತರ ಕಾಲ. ಇವತ್ತು ಅವರು ಒಂದು ಗಂಭೀರವಾದಂಥ ತಮ್ಮ ಕ್ಷೇತ್ರಕ್ಕೆ ಸಂಬಂಧವನ್ನು ಪ್ರಶ್ನೆ ಕೇಳಿದ್ದಾರೆ. ಈ ವಿಷಯ ಗಂಭೀರತೆಯಿಂದ ಕೂಡಿವೆಯೇ ಅಥವಾ ಇಲ್ಲವೇ ಎನ್ನುವುದಷ್ಟೇ ನಮಗೆ ಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರಿಗೆ ಸ್ವಲ್ಪ ಕಾಮನ್ ಸೆನ್ಸ್ ಇದ್ದರೆ ಸಾಕು ಎಂದು ತಿಳಿದುಕೊಂಡಿದ್ದೇನೆ. ನಾವು ಇಲ್ಲಿ ಚರ್ಚೆಗೆ ತಂದಿರತಕ್ಕಂಥಾದ್ದು ನಿಲುವಳಿ ಸೂಚನೆ. ಇದನ್ನು ಬಿಟ್ಟರೆ ನಮಗೆ ಎಲ್ಲವೂ ಮಹತ್ವದ್ದು ಇದೆ. ಈ ಸದನದಲ್ಲಿ ಎಲ್ಲವೂ ಕೂಡ ಮಹತ್ವದ್ದು ಇದೆ.

(ಗೊಂದಲ)

ಅಧ್ಯಕ್ಷರು:- ಇರಲಿ, ನಮಗೆ ಏನು ಆಗಬೇಕು? ಕಾಮನ್ ಸೆನ್ಸ್ ಬಗ್ಗೆ ನಾವು ಇಲ್ಲಿ ಏಕೆ ಚರ್ಚೆ ಮಾಡುವುದಕ್ಕೆ ಹೋಗಬೇಕು. ನಮಗೆ ಏನು ಸಂಬಂಧ? Let us not worry about it.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮಗೆ ಬುದ್ಧಿ ಹೇಳುವವರು ಅವರು ನ್ಯಾ ತಿಳಿದುಕೊಳ್ಳಬೇಕು.

ಅಧ್ಯಕ್ಷರು:- ನಾವು ಕಾಮನ್ ಸೆನ್ಸ್ ಬಗ್ಗೆ ಮಾತನಾಡಿದರೆ ಅವರು ನಗುತ್ತಾರೆ ನೋಡಿ, ಇವರಿಗೆ ಏನು ಸಂಬಂಧ ಎಂದು.

ಶ್ರೀ ಸಿ.ಬೈರೇಗೌಡ:- ಮಾನ್ಯ ಖರ್ಗೆಯವರು ಜಿಗಜಿಣಗಿಯವರ ವಿಚಾರದಲ್ಲಿ ಸರಿಯಾಗಿರತಕ್ಕಂಥ ರೀತಿಯಲ್ಲಿ ಉಪಯೋಗಿಸಿದ ಪದ ಅಲ್ಲ. ದಯವಿಟ್ಟು ತಾವು ಕಡತದಿಂದ ಅದನ್ನು ತೆಗೆಯಬೇಕು. ಏಕೆಂದರೆ, ಅವರು ವೈಯಕ್ತಿಕವಾಗಿ ಅವರ ಬುದ್ಧಿವಂತಿಕೆಯಿಂದ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು:- ಇರಲಿ, ಅವರು ಹೇಳಿದ ಆ ಪದಾರ್ಥ ಇಲ್ಲಿ ಇದೆಯೋ, ಇಲ್ಲವೋ, ಕಡತದಲ್ಲಾದರೂ ಇರಲಿ ಬಿಡಿ. ಏಕೆ ಅದಕ್ಕೆ ಆಕ್ಷೇಪ ಮಾಡುತ್ತೀರಿ?

(ನಗು)

ಶ್ರೀ ಸಿ.ಬೈರೇಗೌಡ:- ತಾವು ಈ ರೀತಿ ಉತ್ತರ ಕೊಟ್ಟುಬಿಟ್ಟರೆ ನಾವು ಏನು ಹೇಳುವುದು.

MR.SPEAKER:- I will examine it. I just said it in a lighter way.

SRI.M.MALLIKARJUNA KHARGE:- Is it unparliamentary?

MR.SPEAKER:- It is not unparliamentary, it is uncommon. I said, common-sense is uncommon.

SRI.M.MALLIKARJUNA KHARGE:- You have to take it in the some way. If you want to criticise somebody else, then you have to tolerate that also.

ಶ್ರೀ ವೈ.ರಾಮಕೃಷ್ಣ:- ಈ ವಿಷಯವನ್ನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳಬೇಕೇ, ಅಥವಾ ಈಗಲೇ ತೆಗೆದುಕೊಳ್ಳಬೇಕೇ ಎನ್ನತಕ್ಕಂಥಾದ್ದು ಕಾಮನ್‌ಸೆನ್ಸ್. Rule 38 is clear. It says, Question Hour unless the Speaker otherwise directs the first hour of every sitting shall be available for asking the questions and answers. ಈಗ ವಿಷಯದ ಗಹನತೆಯನ್ನು ತಾವು ಅರ್ಥಮಾಡಿಕೊಂಡು ಎಲ್ಲಿಯವರೆಗೆ ಇದು ಮುಟ್ಟಿದೆ, ಹಳ್ಳಿಯಿಂದ ದಿಲ್ಲಿಯವರೆಗೆ ಎಂದು ಅವರು ಏನು ಹೇಳಿದರು. ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಮತ್ತು ಐದು ಕೋಟಿ ಜನಕ್ಕೂ ತಗಲಿರತಕ್ಕಂಥ ವಿಚಾರ ಈ ಶಾಖೆ. ಇದನ್ನು ಅನುಸರಿಸಿ

ಹಾಲಿನ ಬೆಲೆ ಜಾಸ್ತಿಯಾಗುತ್ತದೆ, ವಿದ್ಯುಚ್ಚಕ್ತಿ ಬೆಲೆ ಜಾಸ್ತಿಯಾಗುತ್ತದೆ, ನೀರಿನ ಬೆಲೆ ಜಾಸ್ತಿಯಾಗುತ್ತದೆ, ಪೆಟ್ರೋಲ್ ಬೆಲೆ ಹೀಗೆ ಪ್ರತಿಯೊಂದರ ಬೆಲೆಯೂ ಜಾಸ್ತಿಯಾಗುತ್ತದೆಯೆಂದಾಗ ಏನಾಗುತ್ತದೆಂದರೆ ಜನರಲ್ಲಿ ಈಗಾಗಲೇ ಅಶಾಂತಿ ಉಂಟಾಗಿದೆ, ಅವರು ಅತೃಪ್ತರಾಗಿದ್ದಾರೆ. ಸಂಪೂರ್ಣ ಕಂಗೆಟ್ಟಿದ್ದಾರೆ.

ಅಧ್ಯಕ್ಷರು:- ಈ ವಿಷಯಗಳನ್ನೆಲ್ಲ ಈಗಲೇ ಹೇಳಿಬಿಟ್ಟರೆ ಪ್ರಿಲಿಮಿನರಿ ಸಬ್ ಮಿಷನ್ ಗೆ ಮತ್ತೆ ರಿಪೀಟ್ ಮಾಡಬೇಕಾಗುತ್ತದೆ.

ಶ್ರೀ ವೈ.ರಾಮಕೃಷ್ಣ:- ಅದಕ್ಕೋಸ್ಕರ ನಾನು ತಮ್ಮಲ್ಲಿ ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಹಿಂದೆ ಸಂಥ ಸಂದರ್ಭಗಳು ಒದಗಿದಾಗ ತಾವು ಪ್ರಶ್ನೋತ್ತರ ವೇಳೆಯನ್ನು ತಾವು ಸಸ್ಪೆಂಡ್ ಮಾಡಿದ್ದೀರಿ. ಎರಡು ಮೂರು ಸಲ ಅವಕಾಶ ಮಾಡಿಕೊಟ್ಟಿದ್ದೀರಿ. ಅದನ್ನು ನಾನು ತಮಗೆ ಹೇಳಬ್ಬೇಕಾದುದಿಲ್ಲ. ಅವೆಲ್ಲದಕ್ಕಿಂತ ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ದಯವಿಟ್ಟು ತಾವು ಈ ಒಂದು ರೂಲನ್ನು ಮನ್ನಾ ಮಾಡಿ ಈ ವಿಚಾರವನ್ನು ತೆಗೆದುಕೊಂಡು, ಮೊದಲನೆಯ ಸಲವೇ ಈ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎಂದು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ.

★ **ಶ್ರೀ ಬಿ.ಎಸ್.ಯಡಿಯೂರಪ್ಪ:-** ಕಳೆದ 18 ತಿಂಗಳಿಂದ ತಾವು ನೋಡಿದ್ದೀರಿ. ಯಾವುದೋ ಒಂದು ಸಂದರ್ಭ ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ತಾವು ಒಂದು ಸಲಹೆ ಕೊಟ್ಟಾಗ ಅದು ಯಾವುದೇ ನಿಯಮ ಏನಿದೆ ಅಥವಾ ಇನ್ನೊಂದು ನೋಡುವುದಕ್ಕೆ ಹೋಗಿಲ್ಲ. ತಾವು ಏನು ಹೇಳುತ್ತೀರಿ ಅದರಂತೆ ನಾವು ತಲೆಬಾಗಿ ಕಾರ್ಯಕ್ರಮ ನಡೆಸುತ್ತಿದ್ದೇವೆ. ಈಗಲೂ ಅದಕ್ಕೆ ನಾವು ಸಿದ್ಧರಿದ್ದೇವೆ. ಅಧ್ಯಕ್ಷರೇ, ಆ ಪೀಠದಲ್ಲಿ ಕುಳಿತಾಗ ಈ ರೀತಿ ಒಂದು ವಿಶೇಷವಾದಂಥ ಸಂದರ್ಭ ಬಂದಾಗ ಸತ್ಸಂಪ್ರದಾಯವಾಗಬೇಕು. ಇಂಥ ಅನೇಕ ಉದಾಹಾರಣೆಗಳಿವೆ. ತಾವೇ ರೂಲಿಂಗನ್ನು ನೋಡಿ, ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅನೇಕ ಬಾರಿ ತಾವೂ ಮಾಡಿಕೊಟ್ಟಿದ್ದೀರಿ. ಈಗ ತಾನೇ ಮಂತ್ರಿಗಳನ್ನು ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ ತಾವು ಮಾಡಿಕೊಟ್ಟಿದ್ದೀರಿ. ದಯಮಾಡಿ ಇದೊಂದು ವಿಶೇಷ ಸಂದರ್ಭ ಎಂದು ಪರಿಗಣನೆ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಿ. ಏಕೆಂದರೆ ಪ್ರಶ್ನೋತ್ತರದಲ್ಲಿ ಉತ್ತರ ಕೇಳುತ್ತೇವೆ. ಯಾವುದಾದರೂ ಉತ್ತರ ಸಮಂಜಸವಾಗಿದೆಯೇ ಹೇಳಿ. ಅದರಿಂದ ಏನು ಪರಿಣಾಮವಾಗದೆ. ಇದು ಎಲ್ಲದರ ಮೇಲೆ ದುಷ್ಪರಿಣಾಮವಾಗುವಂಥ, ಇತಿಹಾಸದಲ್ಲೇ ಎಂದೂ ಕಾಣದಿರುವಂಥ ವಿದ್ಯುತ್ ದರ ಏರಿಕೆ ಆಗಿದ್ದಾಗ, ಶ್ರೀ ಸಾಮಾನ್ಯ ಮೊದಲು ನೋಡುವುದು ವಿಧಾನ ಮಂಡಲದಲ್ಲಿ ಈ ಕಡೆ ಪ್ರತಿಪಕ್ಷದಲ್ಲಿ ಕುಳಿತವರು ಕೊನೆಯ ಪಕ್ಷ ಇದಕ್ಕೆ ಮಹತ್ವ ಕೊಟ್ಟರೋ, ಇಲ್ಲವೋ ಅಧ್ಯಕ್ಷರಿಗೆ ಇದನ್ನು ಮನವರಿಕೆ ಮಾಡಿಕೊಟ್ಟರೋ, ಇಲ್ಲವೋ, ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಂಡುವಲ್ಲಿ ವಿಫಲರಾದರೇನೋ ಎನ್ನುವ ಭಾವನೆ ಜನರಲ್ಲಿ ಮೂಡುವುದು ಬೇಡ. ಅದಕ್ಕಾಗಿ ಮಹತ್ವದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಇದೊಂದು ಬಾರಿ ಸಭಾನಾಯಕರು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ನಾವು ಈ ಕಡೆ ಇರತಕ್ಕಂಥ ಕಾಂಗ್ರೆಸ್ ಪಕ್ಷದ ನಾಯಕರು, ಖರ್ಗೆಯವರು ಹೇಳಿದ್ದಾರೆ, ನಾಗರಾಜ್‌ರವರು ಹೇಳಿದ್ದಾರೆ, ಎಲ್ಲರ ಅಭಿಪ್ರಾಯವೂ ಅದೇ ಇರುವುದರಂದ ದಯಮಾಡಿ ಇದೊಂದು ಬಾರಿ ತಾವು ಇದಕ್ಕೆ ಅವಕಾಶ ಮಾಡಿಕೊಡಿ, ಇದು ಒಂದು. ಎರಡನೆಯದಾಗಿ, ಈ ಸದನದಲ್ಲಿದ್ದವರು ಕೆಲವರು ಮಂತ್ರಿಗಳಾಗಿದ್ದಾರೆ, ಪ್ರಧಾನಿಗಳೂ ಆದರು.

ಯಾರಯಾರ ಸದಸ್ಯತ್ವ ಮುಂದುವರೆದಿದೆ, ಈ ಮನೆಯ ಸದಸ್ಯರು ಇನ್ನೂ ಹೌದೋ ಅಲ್ಲವೋ ಎನ್ನುವುದನ್ನು ಹೇಳಬೇಕು. ಏಕೆಂದರೆ, ನಮಗೆ ಬಂದಿರುವ ಸುದ್ದಿಯ ಪ್ರಕಾರ ಸನ್ಮಾನ್ಯ ಪ್ರಧಾನಿ ದೇವೇಗೌಡರು ಇನ್ನೂ ಇಲ್ಲಿ ಸದಸ್ಯರಾಗಿ ಮುಂದುವರಿಯುತ್ತಿದ್ದಾರೆ ಎನ್ನುವಂಥಾದ್ದು ಇದೆ. ಅವರು ಈಗಲೂ ಈ ಮನೆಯ ಹಾಲಿ ಸದಸ್ಯರೇ ಅಥವಾ ಇಲ್ಲವೇ ಎಂಬುದನ್ನು ತಿಳಿಸಿ. ಪ್ರಧಾನಿಗಳಾದಂಥವರು ಈ ಮನೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆಯೇ ಎನ್ನುವುದನ್ನು ಈ ಸದನದ ಗಮನಕ್ಕೆ ತಾವು ತರಬೇಕಾಗುತ್ತದೆ. ದಯಮಾಡಿ ಮೊದಲು ನಿಲುವಳಿ ಸೂಚನೆಯನ್ನು ತೆಗೆದುಕೊಂಡು, ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ಅವಕಾಶ ಮಾಡಿಕೊಡಬೇಕು.

★**ಅಧ್ಯಕ್ಷರು:-** ತಾವು ಏನು ವಿಷಯ ಪ್ರಸ್ತಾಪ ಮಾಡಿ ಕಳೆದ 18 ತಿಂಗಳ ಅವಧಿಯಲ್ಲಿ ಸಹಕಾರ ಕೊಟ್ಟಿದ್ದೇನೆ ಎಂದು ಹೇಳಿದ್ದೀರಿ ಅದಕ್ಕೆ ನಾನು ತುಂಬು ಹೃದಯದಿಂದ, ಮುಕ್ತಕಂಠದಿಂದ ನೀವು ನನಗೆ ಕೊಟ್ಟಿರತಕ್ಕಂಥ ಸಹಕಾರವನ್ನು ಯಾವ ಮುಚ್ಚುಮರೆ ಇಲ್ಲದೆ ಶ್ಲಾಘನೆ ಮಾಡುತ್ತಿದ್ದೇನೆ. ಈ ವಿಧಾನಸಭೆಯಲ್ಲಿರತಕ್ಕಂಥ ಪಕ್ಷದ ಬಲಾಬಲಗಳ ಪರಿಸ್ಥಿತಿಯನ್ನು ನೋಡಿದರೆ, ವಿರೋಧ ಪಕ್ಷಗಳವರು ನನ್ನ ಜೊತೆಗೆ ಸಹಕರಿಸದೇ ಇದ್ದಿದ್ದರೆ ನಾನು ಯಶಸ್ವಿಯಾಗಿ ಈ ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಾನು ನಿಮಗೆ ಋಣಿಯಾಗಿದ್ದೇನೆ. ವಿದ್ಯುತ್ ದರದ ಏರಿಕೆಯ ವಿಚಾರದಲ್ಲಿ ತಾವು ಏನು ವಿಷಯದ ಗಾಂಭೀರ್ಯ ಮತ್ತು ಪ್ರಾಮುಖ್ಯತೆಯನ್ನು ಪ್ರಸ್ತಾಪ ಮಾಡಿದಿರಿ ಅದನ್ನು ನಾನು ಅಲ್ಲಗೆಳೆಯುತ್ತಿಲ್ಲ. ಪ್ರಶ್ನೋತ್ತರ ಕೂಡ ಸದನದ ಕಾರ್ಯಕಲಾಪಗಳಲ್ಲಿ ಅಷ್ಟೇ ಮುಖ್ಯ ಕಾರ್ಯಕ್ರಮವಾದ್ದರಿಂದ, ಇದನ್ನು ನಾವು ಪ್ರತಿಷ್ಠೆಯನ್ನಾಗಿ ಪ್ರಶ್ನೋತ್ತರವನ್ನು ಒಂದೇ ಒಂದು ಗಂಟೆ ಕಾಲ ಮುಗಿಸಿಬಿಟ್ಟು, ತಕ್ಷಣ ನೀವು ಏನು ಸೂಚನೆ ಕೊಟ್ಟಿದ್ದೀರಿ, ಎಲ್ಲಾ ಸದಸ್ಯರು ಸಹಿ ಮಾಡಿ ಕೊಟ್ಟಿದ್ದೀರಿ, ಎಲ್ಲರಿಗೂ ನಾನು ಅವಕಾಶವನ್ನು ಕೊಡುತ್ತೇನೆ. ತಾವು ದಯಮಾಡಿ ಏನೆಲ್ಲಾ ಹೇಳಬೇಕು ಎಂದಿದ್ದೀರಿ ಅದನ್ನೆಲ್ಲ ಹೇಳಿ. ನಾವು ಈಗ ತೆಗೆದುಕೊಳ್ಳಬೇಕೇ, ಆ ನಂತರ ತೆಗೆದುಕೊಳ್ಳ ಬೇಕೇ ಎನ್ನುವುದರಲ್ಲಿ ಕಾಲವ್ಯಯ ಮಾಡತಕ್ಕಂಥಾದ್ದು ಬೇಡ. ಮತ್ತು ಸದಸ್ಯರುಗಳ ಬಗ್ಗೆ ತಾವು ಕೇಳಿದ್ದೀರಿ. ಯಾರ್ಯಾರು ಸದಸ್ಯರು ಈ ಮನೆಯ ಸದಸ್ಯರಾಗಿದ್ದು, ಪಾರ್ಲಿಮೆಂಟಿಗೆ ಸ್ಪರ್ಧಿಸಿ ಗೆದ್ದು ಹೋಗಿದ್ದಾರೆ. ಅವರು ರಾಜೀನಾಮೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಬುಲೆಟಿನ್ ಮುಖಾಂತರ ಎಲ್ಲಾ ಸದಸ್ಯರುಗಳಿಗೂ ಮಾಹಿತಿ ಕೊಟ್ಟಿದ್ದಾರೆ. ಸನ್ಮಾನ್ಯ ದೇವೇಗೌಡರು, ಪ್ರಧಾನಮಂತ್ರಿಯಾಗಿರತಕ್ಕಂಥವರು ಈ ಸದನದ ಸದಸ್ಯರಾಗಿದ್ದರು, ಅವರು ಈಗ ಪ್ರಧಾನ ಮಂತ್ರಿಯಾಗಿದ್ದಾರೆ. ಅವರಿಗೆ ಈಗ ಸಂವಿಧಾನದ ಪ್ರಕಾರ ಆರು ತಿಂಗಳ ಕಾಲಾವಕಾಶ ಇರುತ್ತದೆ. ಅವರು ಈ ಮನೆಯ ಸದಸ್ಯತ್ವವನ್ನು ಉಳಿಸಿಕೊಳ್ಳಬೇಕೇ ಅಥವಾ ಸದನಕ್ಕೆ ಸದಸ್ಯರಾಗಿ ಹೋಗಬೇಕೇ ಬೇಡವೇ ಎನ್ನುವ ಬಗ್ಗೆ ಅವರಿಗೆ ಹೇಳುವುದಾದರೆ ಸದನದ ಸದಸ್ಯತ್ವ ಸಿಕ್ಕಾಗ ಮಾತ್ರ. ಅದು ಗೆಜೆಟ್ ನೋಟಿಫಿಕೇಷನ್‌ನಲ್ಲಿ ಪಬ್ಲಿಕೇಷನ್ ಆದ 14 ದಿವಸದೊಳಗೆ ಒಂದು ನಿರ್ಣಯವನ್ನು ಅವರು ಮಾಡಬೇಕಾಗುತ್ತದೆ. ಆದ್ದರಿಂದ ಅವರಿಗೆ ಇನ್ನೂ ಅವಕಾಶ ಇದೆ. ಅವರು ಏಕೆ ರಿಸೈನ್ ಮಾಡಿಲ್ಲ ಎಂದು ಕೇಳುವ ಹಕ್ಕು ನಮಗೆ ಇರುವುದಿಲ್ಲ. ಅವರು ರಾಜೀನಾಮೆಯನ್ನು ಕಳುಹಿಸಿದ ತಕ್ಷಣ ತಮ್ಮೆಲ್ಲರ ಗಮನಕ್ಕೆ ನಾನು ತರುತ್ತೇನೆ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನಾವು ಅಗತ್ಯ ಇದ್ದಾಗ ಪ್ರಶ್ನೆಗೆ ಉತ್ತರ ಬೇಕಾದರೆ

ಕೇಳಬಹುದಲ್ಲ, ಮಾಜಿ ಮುಖ್ಯಮಂತ್ರಿಗಳು ಎಂದು ನಿಯಮ ಏನಿದೆ? ಅದಕ್ಕೆ ನಾನು ಸೃಷ್ಟೀಕರಣ ಕೇಳುತ್ತೇನೆ.

ಅಧ್ಯಕ್ಷರು:- ಅವರು ಮುಖ್ಯ ಮಂತ್ರಿಯಾಗಿ ರಾಜೀನಾಮೆ ಕೊಟ್ಟಿದ್ದಾರೆ. ಅವರು ಈ ಸದನದ ಸದಸ್ಯತ್ವವನ್ನು ಇಟ್ಟುಕೊಂಡಿದ್ದಾರೆ. ಹಾಗೆ ಇಟ್ಟುಕೊಳ್ಳತಕ್ಕಂಥ ಹಕ್ಕು ಸಂವಿಧಾನಬದ್ಧವಾಗಿ ಅವರಿಗೆ ಇರುತ್ತದೆ. ಸದನದ ಸದಸ್ಯರಿಗೆ ನಾವು ಯಾವುದೇ ಪ್ರಶ್ನೆ ಕೇಳುವುದಿಲ್ಲ. ಮುಖ್ಯ ಮಂತ್ರಿಗಳಿಗೆ , ಮಂತ್ರಿಗಳಿಗೆ ಪ್ರಶ್ನೆಯನ್ನು ಕೇಳುತ್ತೀರಿ. ಅವರು ಒಂದು ವೇಳೆ ಮುಖ್ಯಮಂತ್ರಿಯಾಗಿ ಇಲ್ಲೇ ಇದ್ದು, ಅಲ್ಲಿ ಹೋಗಿ ಪ್ರಧಾನಿಯಾಗಿದ್ದರೆ ಆಗ ನೀವು ಕೇಳುವ ಪ್ರಶ್ನೆ ಉಚಿತವಾಗುತ್ತಿತ್ತು. ಈಗ ಅವರು ಮುಖ್ಯ ಮಂತ್ರಿ ಅಲ್ಲ. ಅವರು ಇಲ್ಲಿ ಇದ್ದಿದ್ದರೆ ಏನು ಪ್ರಶ್ನೆಯಾಗಿ ಕೇಳಬೇಕು ಎಂದಿದ್ದೀರೋ ಅದನ್ನೆಲ್ಲಾ ಇವರಿಗೇ ಕೇಳಿದರೆ ಇವರೇ ಉತ್ತರ ಹೇಳುತ್ತಾರೆ. ಅದೇನು ಸಮಸ್ಯೆಯಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಒಂದು ಸಮಸ್ಯೆ ಬರುತ್ತದೆ. ಏಕೆಂದರೆ ಅವರು ಇನ್ನೂ ಆರು ತಿಂಗಳವರೆಗೂ ಈ ಮನೆಯ ಸದಸ್ಯರಾಗಿ ಇರುವ ಕಾರಣ ಅನೇಕ ಸಾರಿ ವಿಷಯವನ್ನು ಪ್ರಸ್ತಾಪ ಮಾಡುವಾಗ ಅವರ ಬಗ್ಗೆ ಪ್ರಸ್ತಾಪ ಬರಬಹುದು. ಅದಕ್ಕಾಗಿ ಅವರ ವಿಷಯವನ್ನು ಈ ಮನೆಯಲ್ಲಿ ಪ್ರಸ್ತಾಪ ಮಾಡುವುದು ಉಚಿತವಲ್ಲ ಎಂದು ಹೇಳಿದರೆ, ಈಗ ಅವರು ಆ ಮನೆಯ ಸದಸ್ಯರಾದ ಮೇಲೆ, ಇನ್ನೂ ಆರು ತಿಂಗಳು ಇಲ್ಲಿ ಮುಂದುವರಿಸಿಕೊಂಡು ಹೋಗುತ್ತಾರೆ ಎಂದು ಗೊತ್ತಾದ ಮೇಲೆ ಅನೇಕ ಸಮಸ್ಯೆಗಳು ಬಂದಾಗ ನಾವು ಅವರ ಹೆಸರು ಹಿಡಿದು ಹೇಳಬೇಕಾಗುತ್ತದೆ. ಮಾಜಿ ಮಂತ್ರಿಗಳು ಹೀಗೆ ಮಾಡಿದರು, ಮುಖ್ಯಮಂತ್ರಿಗಳು ಹೀಗೆ ಮಾಡಿದರು ಅಥವಾ ಮಾಜಿ ಮುಖ್ಯಮಂತ್ರಿಗಳು ಇಂಥ ನಿರ್ಣಯವನ್ನು ತೆಗೆದುಕೊಂಡರು ಎನ್ನತಕ್ಕಂಥ ಮಾತುಗಳು ಬರುತ್ತವೆ. ಅದಕ್ಕೆ ಅದು ಬರಬಾರದು ಎನ್ನತಕ್ಕಂಥಾದ್ದು ಅವರ ಇಚ್ಛೆ. ಅವರು ಇಲ್ಲಿಯ ಸದಸ್ಯತ್ವಕ್ಕೆ ರಾಜೀರಾಮೆ ಕೊಡಬೇಕು ಇಲ್ಲದಿದ್ದರೆ ಹಾಗೆಯೇ ಮುಂದುವರಿಯಬಹುದು. ಇದು ಏನಾಗುತ್ತದೆ ಎಂದರೆ ಒಂದು ಕೆಟ್ಟ ಸಂಪ್ರದಾಯವಾಗುತ್ತದೆ. ದೇಶದ ಒಬ್ಬ ಪ್ರಧಾನ ಮಂತ್ರಿಯ ಬಗ್ಗೆ ನಾವು ಇಲ್ಲಿ ಮಾತನಾಡುತ್ತಿದ್ದೇವೆ, ಚರ್ಚೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತುಗಳನ್ನು ಇಡೀ ದೇಶದಲ್ಲಿ ಆಡುತ್ತಾರೆ.

ಅಧ್ಯಕ್ಷರು : ನೀವು ಹೇಳುವುದಕ್ಕೆ ಮುಂಚೆಯೇ ಯಾವುದು ಸರಿಹೋಗುತ್ತದೆ ಅದಕ್ಕೆ ನಾನು ಅವಕಾಶ ಕೊಡುತ್ತೇನೆ. ಯಾವುದು ಕ್ರಮಬದ್ಧ ಅಲ್ಲ, ಸರಿಯಲ್ಲ ಎನ್ನುವುದನ್ನು ನಾನು ತಮಗೆ ಕ್ರಮಬದ್ಧವಲ್ಲವೆಂದು ತಿಳಿಸಿ ಹೇಳುತ್ತೇನೆ.

SRI MALLIKARJUNA KHAKGE : Sir, as long as he is a Member of this House, naturally . . . .

(INTERUPTIONS)

ಅಧ್ಯಕ್ಷರು : ತಾವು ದಯಮಾಡಿ ಕೇಳಬೇಕು.

He is a Member of this House. Definitely he is a member of this House. There is no second opinion. But it does not lie in my jurisdiction or within the jurisdiction of this House to compel him to submit hisnresignation to the Member-ship of this House. It is en-

tirely different.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಆ ರೀತಿ ಅಲ್ಲ. ಅವರು ಎಲ್ಲಿಯವರೆವಿಗೆ ಈ ಮನೆಯ ಸದಸ್ಯರಾಗಿರುತ್ತಾರೋ, ಇದು ದೇಶದ ಇತಿಹಾಸದಲ್ಲಿಯೇ ಮೊದಲನೆಯ ಸಂದರ್ಭ ಇಂತಹ ಸಂದರ್ಭ ಹಿಂದೆಂದೂ ಬಂದಿಲ್ಲ. ಹಾಗಾಗಿ ಅನೇಕ ಸಂದರ್ಭದಲ್ಲಿ ರಾಜ್ಯಸರ್ಕಾರದ ಆಡಳಿತವನ್ನು ಚರ್ಚೆ ಮಾಡುವಾಗ ಅನಿವಾರ್ಯವಾಗಿ ನಾವು ಅದನ್ನು ಪ್ರಸ್ತಾಪ ಮಾಡಬೇಕು ಮತ್ತು ತಾವು ಅದಕ್ಕೆ ಅವಕಾಶ ಮಾಡಿಕೊಡಲೇ ಬೇಕಾಗುತ್ತದೆ. ಈ ರೀತಿಯ ಸಂದರ್ಭವನ್ನು ಯಾವ ವಿಷಯದಲ್ಲಿ ನೋಡುತ್ತೀರಿ ? ಏಕೆಂದರೆ ಇದು ಇತಿಹಾಸದಲ್ಲಿಯೇ ಮೊದಲನೇ ಸಲ ಬಂದಿರುತ್ತದೆ. ಈ ಸದನ ಮಾಡಿರುವ ರೂಲನ್ನು ನೀವು ಅನುಸರಿಸಬೇಕಾಗುತ್ತದೆ. ನಾವೇ ಮಾಡಿರತಕ್ಕಂಥ ಕಾನೂನುನಲ್ಲಿ ತಾವು ಕೆಲಸ ಮಾಡುತ್ತಾ ಇದ್ದೀರಿ. ನಾನು ಹೇಳುವುದೇನೆಂದರೆ ಈ ದೇಶದ ಇತಿಹಾಸದಲ್ಲಿ ಇದು ಮೊದಲ್ದಾರಿಂದ ಅನೇಕ ಸಂದರ್ಭದಲ್ಲಿ ನಾವುಗಳು ಪ್ರಸ್ತಾಪ ಮಾಡಬೇಕಾಗುತ್ತದೆ. . . ಈ ರೂಲ್ ಬುಕ್ ತೆಗೆದು ನೋಡಿದರೆ . . . . ಈ ಸದನದಲ್ಲಿರತಕ್ಕಂಥ ಅನೇಕ ಜನ ಇದನ್ನು ಪ್ರಸ್ತಾಪ ಮಾಡಿಯೇ ಮಾಡುತ್ತಾರೆ. ಅವರಿಗೆ ಏನು ಉತ್ತರ ಕೊಡಿಸಬೇಕೋ ಅದಕ್ಕೆ ಸಂಬಂಧಪಟ್ಟ ಹಾಗೆ ತಾವು ನಮ್ಮ ರಕ್ಷಣೆಗೆ ಬರಲೇ ಬೇಕಾಗುತ್ತದೆ. ಏಕೆಂದರೆ ಇದು ಒಂದು ವಿಶೇಷ ಸಂದರ್ಭ. ತಾವು ಕುಳಿತು ಚರ್ಚೆ ಮಾಡಿ ಒಂದು ತೀರ್ಮಾನವನ್ನು ಇದರ ಬಗ್ಗೆ ಕೊಡಿ. ತಾವು ಸಮೇತ ರೂಲಿಂ ಕೊಡಬೇಡಿ. ಏಕೆಂದರೆ ಇದು ಮೊದಲನೇ ಸಂದರ್ಭ. ಹೇಗೆ ಕೊಡುತ್ತೀರಿ ರೂಲೀಗೆ ? ಇದು ಸಾಧ್ಯವಿಲ್ಲ.

ಅಧ್ಯಕ್ಷರು: ನನಗೆ ಯಾವ ಗೊಂದಲ ಇಲ್ಲ. ವಿಷಯದ ಬಗ್ಗೆ ನನಗೆ ಸ್ಪಷ್ಟವಾದ ಚಿತ್ರಣ ಇದೆ. ನಿಯಮವನ್ನು ಬಿಟ್ಟು ಇಲ್ಲಿ ಯಾವ ಕಲಾಪವನ್ನು ನಡೆಯುವುದಕ್ಕೆ ಬಿಡುವುದಿಲ್ಲ. ನಿಯಮದೊಳಗೆ, ನಿಯಮದ ಚೌಕಟ್ಟಿನಲ್ಲಿ ತಾವು ಯಾವುದೇ ವಿಚಾರ ಪ್ರಸ್ತಾಪ ಮಾಡಿದರೂ ನಾನು ಅದಕ್ಕೆ ಅಡ್ಡಿಪಡಿಸುವ ಹಕ್ಕು ನನಗಿಲ್ಲ. ಮಾಡಿಸುವ ಪ್ರಯತ್ನವನ್ನೂ ನಾನು ಮಾಡುವುದಿಲ್ಲ. ನಾನು ಏನು ಮಾಡುತ್ತೇನೆಂದು ನೀವು ಏಕೆ ಯೋಚನೆ ಮಾಡುತ್ತಿರಿ ? ನಾನು ಏನು ಮಾಡಬೇಕೋ ಅದನ್ನು ಸಮಯಕ್ಕೆ ಸರಿಯಾಗಿ ಮಾಡುತ್ತೇನೆ ನಿಮ್ಮ ವಿಶ್ವಾಸಕ್ಕೆ, ಅರ್ಹತೆಯಾಗಿ ನನಗೆ ಏನು ಕೊಟ್ಟಿದ್ದೀರೋ ಅದಕ್ಕೆ ಸರಿಯಾಗಿ ನಡೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಈ ಸದನದಲ್ಲಿ ಇಲ್ಲದೇ ಇರತಕ್ಕಂಥ ಸದಸ್ಯರ ಬಗ್ಗೆ ಇಲ್ಲಿ ಯಾರೂ ಅಕ್ಷೇಪಣೆ ಮಾಡಬಾರದು ಏಕೆಂದರೆ ಅವರು ತಮ್ಮ ರಕ್ಷಣೆ ಇಲ್ಲಿ ಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಒಂದು ವಿಚಾರ ಈ ನಿಯಮದ ಪ್ರಕಾರ ತಮ್ಮಲ್ಲಿ ಇದೆ. ನಾವೇನಾದರೂ ಅವರ ಬಗ್ಗೆ ಟೀಕೆಟಿಪ್ಪಣಿ ಮಾಡಿದಾಗ ಪ್ರಶ್ನೆ ಏನು ಉದ್ಭವವಾಗುತ್ತದೆ ಅವರು ಇಲ್ಲಿಂದ ಹೋಗಬೇಕು ಎಂದು ನಾನು ಹೇಳುತ್ತಿಲ್ಲ, ಅವರು ಪಾಪ ಕರ್ನಾಟಕದಲ್ಲಿ ಇರಲಿ ಅದರ ಬಗ್ಗೆ ನನ್ನ ವಾದ ಇಲ್ಲ. ಆದರೆ ಇಲ್ಲಿ ಅದರ ಸ್ಪಷ್ಟ ನಿಲುವು ಏನು ಎನ್ನುವುದು ಇರಬೇಕು.

ಹೇಳಿ ನನಗೇನವು ಇಲ್ಲ. ಆಮೇಲೆ ಜನರೆಲ್ಲ ಹೇಳುತ್ತಾರೆ. ಅದೇನೆಂದರೆ ಕನ್ನಡಿಗರು ಒಬ್ಬರು ಪ್ರಧಾನಮಂತ್ರಿ ಆದರು, ಇವರು ಇಷ್ಟೆಲ್ಲ ಕನ್ನಡವೆಂದು ಮಾತನಾಡುತ್ತಾರೆ ಅವರ ಮೇಲೆ.

(ಗೊಂದಲ)

ಶ್ರೀ ಜೆ.ಹೆಚ್.ಪಟೀಲ್ (ಮಾನ್ಯ ಮುಖ್ಯಮಂತ್ರಿಗಳು) :-ಈಗ ರಾಷ್ಟ್ರಪತಿಗಳಿಂದ ಪ್ರಮಾಣ ವಚನ ಸ್ವೀಕಾರ ಮಾಡಿ ಅವರಿಗೆ ಪ್ರಧಾನಮಂತ್ರಿ ಎಂದು ಘೋಷಣೆ ಮಾಡಿದ ಮೇಲೆ ಯಾವುದೇ ಸಂವಿಧಾನಿಕ ಆಕ್ಷೇಪಣೆಗಳು ಬರುವುದಿಲ್ಲ. ಈ ಸದನ ಸದಸ್ಯತ್ವವನ್ನು ಅವರು ಸಂವಿಧಾನದ ಪ್ರಕಾರವೇ ಇಟ್ಟುಕೊಂಡಿರುತ್ತಾರೆ. ಯಾರೋ ಹೇಳಿದರು ಎಂದು ಅವರು ಅವರ ಸದಸ್ಯತ್ವವನ್ನು ಇಟ್ಟುಕೊಂಡಿದ್ದಲ್ಲ. ಇನ್ನೊಂದು ತಾವು ಏನು ಪ್ರಶ್ನೆ ಎತ್ತಿದ್ದೀರಿ ಈ ಸದನದ ಸದಸ್ಯರಾಗಿ ಅವರಿಗೆ ಇರತಕ್ಕಂಥ ಲೀಗಲ್ ಅಬ್ಲಿಗೇಷನ್ಸ್ ಏನು ಇದೆ ಅದನ್ನು ಅವರು ನಿರ್ವಹಿಸುತ್ತಾರೆ. ಮಾನ್ಯ ಅಧ್ಯಕ್ಷರು ಯಾವ ಸಂದರ್ಭದಲ್ಲಿ ಏನು ತೀರ್ಪು ಕೊಡುತ್ತಾರೋ ಅದು ಸದಸ್ಯರಾಗಿರುವವರೆಗೆ ಅವರಿಗೂ ಬೈಂಡಿಂಗ್ ಆಗಿರುತ್ತದೆ.

(ಗೊಂದಲ)

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆ ಮೊದಲನೇ ಪ್ರಶ್ನೆ ಸಭಾಪತಿಯವರಿಂದ.

ಶ್ರೀ ವಾಟಾಳ್ ನಾಗರಾಜ್ : ತಾವು ನಿಲುವಳಿ ಸೂಚನೆ ಬಗ್ಗೆ ಏನೂ ಹೇಳಲಿಲ್ಲ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿದ ನಂತರ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತಿದ್ದೇನೆ ಎಂದು ನಾನು ಹೇಳಿದ್ದೇನೆ. ಆದರಲ್ಲಿ ನಿಮಗೆಲ್ಲರಿಗೂ ಅವಕಾಶ ಕೊಡುತ್ತಾ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್: ತಮ್ಮಲ್ಲಿ ನನ್ನದು ಒಂದು ವಿನಂತಿ, ನಾನು ತಮ್ಮ ತೀರ್ಪಿನ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. . . . .

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಇಂತಹ ಮುಖ್ಯ ವಿಷಯಕ್ಕೆ ಅವಕಾಶ ಕೊಡುವುದಿಲ್ಲವೆಂದಾದರೆ ನಾವು ರಾಜ್ಯದ ಜನತೆಗೆ ಏನು ಉತ್ತರ ಕೊಡಬೇಕು ? ದಯವಿಟ್ಟು ಹೇಳಿ.

ಅಧ್ಯಕ್ಷರು : ಯಡಿಯೂರಪ್ಪನವರೆ, ರಾಜ್ಯದ ಇತಿಹಾಸ, ವಿಧಾನಮಂಡಲದ ಇತಿಹಾಸ, ಬೃಹದಾಕಾರವಾಗಿ ಇದೆ. ನಾವು ಅದನ್ನು ಕಲಿತುಕೊಳ್ಳುವುದಕ್ಕೆ ಇನ್ನೂ ಬಹಳ ಪ್ರಯತ್ನ ಪಡಬೇಕಾಗಿದೆ. ನಾವು ಒಂದು ಹೊಸ ಇತಿಹಾಸ ಪ್ರಾರಂಭಮಾಡುವುದು ಬೇಡ. ಈಗ ಪ್ರಶ್ನೋತ್ತರ ಪ್ರಾರಂಭ ಮಾಡುತ್ತಾ ಇದ್ದೇನೆ. ಸಭಾಪತಿಯವರೇ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕರ್ನಾಟಕ ಸರ್ಕಾರ ವಿದ್ಯುತ್ ದರ ಏರಿಸಿರುವುದಕ್ಕೆ ವಿರೋಧ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ. ತಮ್ಮ ಮೂಲಕ ಈ ಬಹಿರಂಗ ಪತ್ರವನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಈ ಪತ್ರಕ್ಕೆ ಕರ್ನಾಟಕ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ರೈತಸಂಘ, ಬಹುಸಮಾಜವಾದಿ ಪಕ್ಷ, ವಾಟಾಳ್ ಪಕ್ಷ, ಎಲ್ಲರೂ ಈ ಪತ್ರಕ್ಕೆ ಸಹಿ ಮಾಡಿದ್ದಾರೆ. ಇದನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡುತ್ತಿದ್ದೇನೆ. ಕರ್ನಾಟಕ ಸರ್ಕಾರ ವಿದ್ಯುತ್ ಚ್ಛಕ್ತಿ ದರ ಏರಿಸಿರತಕ್ಕಂಥದ್ದು ಮತ್ತು ಕೇಂದ್ರ ಸರ್ಕಾರ ಪೆಟ್ರೋಲ್, ಡೀಸಲ್ ದರ ಏರಿಸಿರತಕ್ಕಂಥ ನೀತಿಯನ್ನು ಪ್ರಪ್ರಥಮವಾಗಿ ವಿರೋಧಿಸಿ ಈ ರಾಜ್ಯದ ಜನತೆಯ ಪರವಾಗಿ ನಾನು ಸಭಾತ್ಯಾಗ ಮಾಡುತ್ತೇನೆ. ಇದು ಬಹಳ ಅನ್ಯಾಯವಾಗಿದೆ. . . . . (ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

(ಗೊಂದಲ)

MR.SPEAKER: I have already called him.

(INTERRUPTIONS)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಖಂಡಿತ ನಿಮ್ಮನ್ನು ಇಕ್ಕಟ್ಟಿನಲ್ಲಿರುವ ಪ್ರಶ್ನೆ ಇಲ್ಲ. . . .

ಅಧ್ಯಕ್ಷರು : ಯಡಿಯೂರಪ್ಪನವರೇ, ನನಗೆ ಯಾವಾಗಲೂ ಇಕ್ಕಟ್ಟು ಇರಿಸುಮುರಿಸು, ಬಿಕ್ಕಟ್ಟು ಆಗುವುದಿಲ್ಲ. ನಾನು ಬಹಳ ಸ್ಪಷ್ಟವಾಗಿ ಇದ್ದೇನೆ. ಯಾವ ವಿಷಯ ತಾವು ಪ್ರಸ್ತಾಪ ಮಾಡುತ್ತೀರಿ, ಅದರ ಗಂಭೀರತೆಯನ್ನು ನಾನು ಅಲ್ಲಗೆಳೆಯುತ್ತಿಲ್ಲ. ಮತ್ತು ಅದು ಅತ್ಯಂತ ಪ್ರಮುಖ್ಯವಾದ ವಿಷಯವಾದ್ದರಿಂದ ಚರ್ಚೆಗೆ ಅವಕಾಶ ಕೊಡುತ್ತೇನೆ. ಎನ್ನುವಂಥ ಮಾತನ್ನು ಹೇಳಿದ್ದೇನೆ. ನೀವೇ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ಪ್ರಶ್ನೋತ್ತರ ವೇಳೆ ಮುಗಿದ ನಂತರ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. ಸಭಾಪತಿಯವರು ಉಪಪ್ರಶ್ನೆ ಕೇಳುವ ಹಂತದಲ್ಲಿ ಇದ್ದಾರೆ. ದಯಮಾಡಿ ಸಹಕರಿಸಿ. ನಾನು ಏನು ಯೋಚನೆ ಮಾಡುತ್ತೇನೆಂದರೆ ನಾನು ಈ ಸದನದ ಅಧ್ಯಕ್ಷನಾಗಿದ್ದರೂ ಕೂಡ ಈ ಸದನದ ಒಬ್ಬ ಸದಸ್ಯನಾಗಿದ್ದೇನೆ. ಒಂದು ವೇಳೆ ರಾಜ್ಯದ ಹಿತದೃಷ್ಟಿಯಿಂದ ಪ್ರಶ್ನೋತ್ತರ ವೇಳೆಯನ್ನು ಸಸ್‌ಪೆಂಡ್ ಮಾಡಲೇಬೇಕು ಬೇರೆ ಯಾವುದೋ ಮಾರ್ಗ ವಿಲ್ಲವೆಂದು ಯಾವುದೇ ಸಂದರ್ಭದಲ್ಲಿ ಯಾವತ್ತೂ ನಾನು ಅಧ್ಯಕ್ಷನಾಗಿ ಕುಳಿತುಕೊಂಡಿತಕ್ಕಂಥ ಅವಧಿಯೊಳಗೆ ನನ್ನ ಗಮನಕ್ಕೆ ಬಂದರೆ, ಅಂತಹ ಸಂದರ್ಭವನ್ನು ನೀವು ಹೇಳುವುದಕ್ಕೂ ಕೂಡ ನಾನು ಕಾಯುವುದಿಲ್ಲ. ನಾನೇ ಆ ಕೆಲಸವನ್ನು ಮಾಡುತ್ತೇನೆ. ನಾನು ನಿಮಗೆ ಏನು ಹೇಳಿದೆ ಎಂದರೆ ಒಂದು ಗಂಟೆ ಹೆಚ್ಚು ಕಡಿಮೆ ಆಗುವುದರಿಂದ ಪ್ರಶ್ನೋತ್ತರ ಮುಗಿಸಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದರಿಂದ ಬೆಲೆಯೇನು ಇನ್ನಷ್ಟು ಜಾಸ್ತಿ ಆಗುವುದಿಲ್ಲ ಅಥವಾ ಬೇಗ ತೆಗೆದುಕೊಳ್ಳುವುದರಿಂದ ಕಡಿಮೆಯೇನೂ ಆಗುವುದಿಲ್ಲ. ದಯಮಾಡಿ ಪ್ರತಿಷ್ಠೆ ವಿಚಾರ ಘಾತನಾಡುವುದು ಬೇಡ. ಪ್ರಶ್ನೋತ್ತರಕ್ಕೆ ಅವಕಾಶ ಕೊಡಿ ಎಂದು ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಬೇರೆ ಸದಸ್ಯರಿಗೂ ಕೂಡ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಖಂಡಿತ ತಮ್ಮ ಮನಸ್ಸಿಗೆ ನೋವು ಮಾಡಬೇಕು ಎನ್ನವಂಥ ಉದ್ದೇಶ ನಮಗಿಲ್ಲ. . . .

ಅಧ್ಯಕ್ಷರು: ಇಲ್ಲ, ಇಂತಹ ಸಣ್ಣಪುಟ್ಟ ವಿಚಾರಗಳಿಗೆ ಸಂಬಂಧಪಟ್ಟ ಹಾಗೆ ನನ್ನ ಮನಸ್ಸಿಗೆ ನೋವು ಆಗುವುದಿಲ್ಲ. ಮೊದಲು ಪ್ರಾರಂಭದಲ್ಲಿ ನೋವು ಆಗುತ್ತಾ ಇತ್ತು ಈಗ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್, ಈಗ ನಿಮ್ಮ ಸ್ಥಾನದಲ್ಲಿ ಯಾರೇ ಕುಳಿತುಕೊಂಡಿದ್ದರೂ ನಿಮಗೆ ತಳಮಳ ಆಗುತ್ತಾ ಇದೆ. ಒಂದು ತರಹಃ ಬೆಂಕಿ ಮೇಲೆ ಕುಳಿತ ಹಾಗೆ ಆಗಿರಬಹುದು.

ಅಧ್ಯಕ್ಷರು: ನನ್ನ ಮನಸ್ಸಿನಲ್ಲಿ ಏನು ಇದೆ ಅದನ್ನು ನಾನು ಗುಟ್ಟಾಗಿ ಇಟ್ಟಿದೆ. ಅದು ನಿಮ್ಮ ಒಬ್ಬರಿಗೆ ಗೊತ್ತು. ಅದನ್ನು ನೀವು ಬಹಿರಂಗ ಮಾಡಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಸಂಯಮ, ಮತ್ತು ಆಸ್ಥಾನದ

ಗೌರವ ಹೆಚ್ಚಿಸಬೇಕೆಂದು ಕುಳಿತಿದ್ದೀರೇ ವಿನಹ ಇಲ್ಲದಿದ್ದರೆ ಯಾವ ಕಾರಣಕ್ಕೂ ಇಂತಹ ಪರಿಸ್ಥಿತಿಯಲ್ಲಿ ನೀವು ಅಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಇದು ತಮಗೆ ಅನಿವಾರ್ಯ ಪ್ರಸಂಗ ಆದಕ್ಕೆ ನಾನು ಸಭಾನಾಯಕರಲ್ಲಿ ಕೇಳುತ್ತೇವೆ.ಇವರ ಮುಂದೆ ತಾವು ರಿಕ್ವೆಸ್ಟ್ ಮಾಡಿಕೊಂಡು ಪ್ರಶ್ನೋತ್ತರ ವೇಳೆಯನ್ನು ಸೆಸ್ಪೆಂಡ್ ಮಾಡಿ ಈ ಗಂಭೀರ ವಿಷಯದ ಬಗ್ಗೆ ಚರ್ಚೆ ಮಾಡಿ ಎಂದು ನಮಗೆ ಅವಕಾಶ ಕೊಡಿ ಇಲ್ಲದಿದ್ದರೆ ಏನಾಗುತ್ತದೆ ಎಂದರೆ ರಾಜ್ಯದ ಜನತೆಯ ದೃಷ್ಟಿಯಿಂದ ಕರ್ನಾಟಕ ಬಂದ್ ಇದಕ್ಕೆ ಆದ್ಯತೆ ಕೊಡುತ್ತೇವೆ. ಸದನದಲ್ಲಿ ಜನರ ತೊಂದರೆಯನ್ನು ಪ್ರಸ್ತಾಪ ಮಾಡುತ್ತೇವೆ. ಇದಕ್ಕೆ ಪರಿಹಾರ ಹುಡುಕುತ್ತೇವೆ. ಎಂದು ಹೇಳಿ ತದನಂತರ ವೇಳೆಯಲ್ಲಿ ಭಾಗವಹಿಸಿದ್ದೇನೆಂದು ಜನ ನಮ್ಮನ್ನು ತಪ್ಪು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಆ ಒಂದು ಕಪಿ ಮುಷ್ಟಿಯಿಂದ ಸರ್ಕಾರ ಯಾರ ವಿಶ್ವಾಸವನ್ನು ಸಹ ತೆಗೆದುಕೊಳ್ಳದೆ ಮನಬಂದಂತೆ ವಿದ್ಯುತ್ ದರವನ್ನು ಏರಿಸಿರುವುದು ತೊಗಲಕ್ ದರ್ಬಾರ್ ಏನು ನಡೆದಿದೆ ಇದನ್ನು ಪ್ರತಿಭಟಿಸಿ ನಾವೆಲ್ಲ ಹೊರಗಡೆ ಹೋಗುತ್ತೇವೆ. ಪ್ರಶ್ನೋತ್ತರ ವೇಳೆ ಆದನಂತರ ನಿಲುವಳಿ ಸೂಚನೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಾಗ ನಾವು ಬರುತ್ತೇವೆ. ದಯಮಾಡಿ ಈಗಲಾದರೂ ನಿಲುವಳಿ ಸೂಚನೆಗೆ ಅವಕಾಶ ಕೊಡಿ, ನಾವು ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಪೂರ್ಣ ಸಹಕಾರ ಕೊಡುತ್ತೇವೆ ಏಕೆಂದರೆ ಇದು ಬಜೆಟ್ ಅಧಿವೇಶನ ಮೊದಲನೇ ದಿವಸ. . . .

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಲಿರುವ ಸಂದರ್ಭದ ಮೊದಲನೇಯ ದಿವಸ ಇಂತಹ ಬಾಯ್‌ಕಾಟ್ ಮಾಡುವಂಥದ್ದು ಆಗಬಾರದು.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಅಧ್ಯಕ್ಷರ ಅಧಿಕಾರವನ್ನು ನಾನು ಪ್ರಶ್ನೆ ಮಾಡುವ ಹಾಗೆಯೇ ಇಲ್ಲ, ನೀವು ಸಹ ಮಾಡುವ ಆಗಿಲ್ಲ ನೀವು ತಂದಿರತಕ್ಕಂತಹ ನಿಲುವಳಿಯ ಸೂಚನೆಯ ಬಗ್ಗೆ ನಮ್ಮ ಸರ್ಕಾರ ಚರ್ಚೆಗೆ ಸಿದ್ಧವಿದೆ. ರಾಜ್ಯದ ಜನತೆಯ ಹಿತದೃಷ್ಟಿಯಿಂದಲೂ ಇದರ ಬಗ್ಗೆ ಚರ್ಚೆ ಬೇಕು ಆದರೆ ಪ್ರಶ್ನೋತ್ತರದ ವೇಳೆಯನ್ನು ವಿಶೇಷವಾದಂತಹ ಸಂದರ್ಭದಲ್ಲಿ ಮಾತ್ರ ರದ್ದುಪಡಿಸುವುದು ಅಥವಾ ನಂತರ ತೆಗೆದುಕೊಳ್ಳುವುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರು ತಾವು ಹೇಳಿದರೆ ಒಪ್ಪಿಕೊಳ್ಳುತ್ತಾರೆ ಆದರೆ ಈಗ ನಿಮ್ಮ ಮೇಲೆ ನಮಗೆ ವಿಶ್ವಾಸ ಬರುತ್ತಿಲ್ಲ.

(ಗೊಂದಲ)

ಶ್ರೀ ಜೆ.ಹೆಚ್.ಪಟೇಲ್: ಮಾನ್ಯ ಅಧ್ಯಕ್ಷರೆ, ಈಗ ಸದಸನದ ಗಾಂಭೀರ್ಯವನ್ನು ಹಾಳು ಮಾಡುವುದು ಬೇಡ. ನಾನು ಒಬ್ಬ ಈ ಸದನದ ಸದಸ್ಯ. ಈಗ ಪ್ರಶ್ನೋತ್ತರದ ವೇಳೆಯು ಪ್ರಾರಂಭವಾಗಿದೆ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ ಮತ್ತು ಸಂಬಂಧಪಟ್ಟಂತಹ ಸಚಿವರು ಉತ್ತರವನ್ನು ಸಹ ಕೊಟ್ಟಿದ್ದಾರೆ. ಈಗ ಪ್ರಶ್ನೋತ್ತರದ ವೇಳೆಯನ್ನು ರದ್ದು ಮಾಡಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮದೇ ಅದಂತಹ ಒಂದು ಪ್ರತಿಕ್ರಿಯೆಯನ್ನು, ಜನರ ಒಂದು ಭಾವನೆಗಳನ್ನು ವ್ಯಕ್ತಪಡಿಸುವುದು ನಮ್ಮ ಕರ್ತವ್ಯ. ಇದಕ್ಕಿಂತಲೂ ಬೇರೆ ವಿಷಯವು ಪ್ರಮುಖವೆಂದು ಸರ್ಕಾರಕ್ಕೆ ಅನ್ನಿಸಿದರೆ, ನಾವುಗಳು ಪ್ರಶ್ನೋತ್ತರ ವೇಳೆಯನ್ನು ಬಾಯ್ ಕಾಟ್ ಮಾಡಿ ಸದನದಿಂದ ಹೊರಗಡೆ ಇರುತ್ತೇವೆ. ಪ್ರಶ್ನೋತ್ತರ ವೇಳೆ ನಿಲುವಳಿ ಸೂಚನೆಯನ್ನು ತಂದಾಗ ನಾವುಗಳು ಮತ್ತೆ ಸದನಕ್ಕೆ ಬರುತ್ತೇವೆ. ಬಹುಶಃ ಶ್ರೀ ಜೆ.ಹೆಚ್.ಪಟೀಲ್‌ರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಂತಹ ಮೊದಲಿನೇಯ ದಿವಸ ಅದರಲ್ಲಿಯೂ ಶ್ರೀ ಶಾಂತವೇರಿ ಗೋಪಾಲಗೌಡರರಾಗಿರತಕ್ಕಂಥವರೇ ಇಲ್ಲಿ ಇರುವಾಗ ಇಂಥ ಘಟನೆ ಆಗಬಾರದು. ಮಾನ್ಯ ಜೆ.ಹೆಚ್.ಪಟೀಲ್‌ರೇ ಖಂಡಿತವಾಗಿ ಸ್ವಲ್ಪ ಯೋಜನೆಯನ್ನು ಮಾಡಿ. ಖಂಡಿವಾಗಿ ತಾವು ಹೇಳಿದರೆ ಮಾನ್ಯ ಅಧ್ಯಕ್ಷರು ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡುವುದಿಲ್ಲವೆಂದು ಹೇಳುವುದಿಲ್ಲ.

(ಗೊಂದಲ)

ಶ್ರೀಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರು ಒಂದು ರೀತಿಯಲ್ಲಿ ಹೆಣ್ಣು ಮಗು ಇದ್ದ ಹಾಗೆ ಅವರದು ತಾಯಿಯ ಹೃದಯ ಇದ್ದ ಹಾಗೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ರಾಜ್ಯದ ಜನತೆಯ ಹಿತ ದೃಷ್ಟಿಯಿಂದ ನಾವು ಈಗ ಬಾಯ್‌ಕಾಟ್ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ತಾವು ನಮ್ಮ ಜಿಲ್ಲೆಯ ಮುಖ್ಯಮಂತ್ರಿಗಳು ತಾವು ನಮ್ಮ ಜಿಲ್ಲೆಗೆ ಬಂದಾಗ ಯಾವ ರೀತಿ ಯಲ್ಲಿ ಸ್ವಾಗತವನ್ನು ಬಯಸಬೇಕು. ಎಂಬುದನ್ನು ತಾವು ಯೋಚನೆ ಮಾಡಬೇಕು. ವಿದ್ಯುಚ್ಛಕ್ತಿ ದರವನ್ನು ಜಾಸ್ತಿ ಮಾಡಿರುವುದು ಸರಿ ಇಲ್ಲ ಅದುದರಿಂದ ರಾಜ್ಯದ ಜನತೆ ಹಿತದೃಷ್ಟಿಯಿಂದಲಾದರೂ ನಾವು ತಂದಿರತಕ್ಕಂತಹ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು:- ನಿಮ್ಮ ನಾಯಕರು ಈಗಾಗಲೇ ಬಾಯ್‌ಕಾಟ್ ಮಾಡಿ ಹೊರಟುಹೋಗಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಯವರು ಅವರು ನನ್ನ ಮಾತನ್ನು ಕೇಳಿಯಾದರೂ ಒಪ್ಪಿಕೊಳ್ಳತ್ತಾರೆಂದು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೇ ನೀವು ನಮ್ಮ ಜಿಲ್ಲೆಯ ಮುಖ್ಯಮಂತ್ರಿಗಳು, ನೀವು ಮುಖ್ಯಮಂತ್ರಿಗಳಾದ ಮೇಲೆ ನಮ್ಮ ಜಿಲ್ಲೆಗೆ ತಾವು ಇನ್ನು ಬಂದಿಲ್ಲ ಅದುದರಿಂದ ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ ಅವರು ನಮ್ಮ ಜಿಲ್ಲೆಗೆ ಬರಬೇಕು ಅವರು ಬಂದಾಗ ನಾವು ಯಾವ ರೀತಿ ಯಲ್ಲಿ ಸ್ವಾಗತವನ್ನು ಮಾಡಬೇಕು ? ನೀವು ನಮ್ಮ ಜಿಲ್ಲೆಗೆ ಬರಬೇಕೆಂದು ನಮ್ಮ ಆಸೆ ತಾವು ಬಂದಾಗ ನಾವು ಯಾವ ರೀತಿಯಲ್ಲಿ ಸ್ವಾಗತವನ್ನು ಮಾಡಬೇಕು ಎಂದರೆ ಸಂತೋಷದಿಂದ ಬರಮಾಡಿಕೊಳ್ಳಬೇಕೆಂದು ಇದ್ದೇನೆ.

(ಗೊಂದಲ)

ಅಧ್ಯಕ್ಷರು:- ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾವುಗಳು ಈಗಾಗಲೇ ಅಧ್ಯಕ್ಷರನ್ನು ಪ್ರಶ್ನೋತ್ತರದ ವೇಳೆಯನ್ನು ರದ್ದು ಮಾಡಿ ಎಂದು ಮನವಿಯನ್ನು ಮಾಡಿಕೊಂಡಿದ್ದೇವೆ. ತಾವು ಸಹ ಅಧ್ಯಕ್ಷರಿಗೆ ವಿದ್ಯುತ್ ದರವನ್ನು ಹೆಚ್ಚಿಸಿರುವ ಬಗ್ಗೆ ನಿಲುವಳಿ ಸೂಚನೆಯನ್ನು ತಂದಿರತಕ್ಕಂಥದದ್ದಕ್ಕೆ ಅವಕಾಶವನ್ನು ಕೊಟ್ಟು ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡಿ ಒಂದು ಮನವಿಯನ್ನು ಮಾಡಿಕೊಳ್ಳಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೇ, ಶ್ರೀ ಕೆ.ಎಸ್.ಈಶ್ವರಪ್ಪನವರಿಗೆ ಅವರ ನಾಯಕರ ಬಗ್ಗೆ ವಿಶ್ವಾಸ ಇದೆಯೋ ಅಥವಾ ಇಲ್ಲವೋ ಎಂದು ದಯವಿಟ್ಟು ಅವರನ್ನು ಕೇಳಿ. ಏಕೆಂದರೆ ಅವರ ನಾಯಕರು ಈಗಾಗಲೇ ಬಾಯ್‌ಕಾಟ್ ಮಾಡಿ ಸದನದಿಂದ ಹೊರಗಡೆ ಹೋಗಿದ್ದಾರೆ. ಇವರು ಇನ್ನು ಇಲ್ಲಿಯೇ ಇದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನಮಗೆ ಒಂದೇ ಒಂದು ಸಂತೋಷವಾಗಿದೆ ಅದು ಏನೆಂದರೆ ನಮ್ಮ ಜಿಲ್ಲೆಯವರು ರಾಜ್ಯ ಮುಖ್ಯಮಂತ್ರಿಗಳಾಗಿದ್ದಾರೆ.

ಅಧ್ಯಕ್ಷರು:- ಇದು ಏನು ನೀವುಗಳು ಗುಂಪು ಗುಂಪಾಗಿ ನಿಂತುಕೊಂಡು ಬಿಟ್ಟಿದ್ದೀರಲ್ಲಾ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗೆ ಮಾನ್ಯಮುಖ್ಯಮಂತ್ರಿಗಳು ಬಂದಾಗ, ಸಾರ್ವಜನಿಕರು ಏನು ಅನ್ಯಾಯವನ್ನು ಮಾಡಿದ್ದೀರಿ ಎಂದು ತಮ್ಮನ್ನು ಕೇಳಿದಾಗ ತಾವು ಏನು ಉತ್ತರವನ್ನು ಕೊಡುತ್ತೀರಿ ? ಅವರು ನಮ್ಮ ಜಿಲ್ಲೆಗೆ ಬಂದಾಗ ಹಾರ ಹಾಕಿ ದೊಡ್ಡದಾಗಿ ಸ್ವಾಗತವನ್ನು ಮಾಡಬೇಕೆಂಬುದು ನಮ್ಮ ಆಸೆ. ಇದು ಇಡೀ ರಾಜ್ಯ ಜನತೆಯ ಸಮಸ್ಯೆಯಾಗಿರುವುದರಿಂದ ನಾವು ತಂದಿರತಕ್ಕಂಥಹ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡಿವುದಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ನೀವು ಅವರು ಇಬ್ಬರು ಕುಳಿತುಕೊಂಡು ಮಾತನಾಡಿಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳಲಿ, ಪ್ರಶ್ನೋತ್ತರದ ವೇಳೆಯನ್ನು ಈಗ ನಿಲ್ಲಿಸಿ ಏಕೆಂದರೆ ರಾಜ್ಯದ ಜನತೆಗೆ ದ್ರೋಹವಾಗಿರತಕ್ಕಂಥ ಸಂದರ್ಭವಾಗಿರುವುದರಿಂದ. ಅವರು ಇದನ್ನು ಒಪ್ಪಿಕೊಳ್ಳಲಿ ಇಲ್ಲದಿದ್ದರೆ ನಮ್ಮ ಜಿಲ್ಲೆಗೆ ಅವರು ಅವಮಾನ ಮಾಡಿದ ಹಾಗೆ ಆಗುತ್ತದೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಸಭಾತ್ಯಾಗ ಮಾಡಿದರು.)

★**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:-** ಮಾನ್ಯ ಅಧ್ಯಕ್ಷರೇ ಈ ವಿಷಯದ ಪ್ರಾಶಸ್ತ್ಯವನ್ನು ತಿಳಿದುಕೊಂಡರೆ, ನಾವು ಈ ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿ ತಮ್ಮಲ್ಲಿ ನಾವುಗಳು ಮನವಿಯನ್ನು ಮಾಡಿಕೊಂಡೆವು. ಏಕೆಂದರೆ ವಿದ್ಯುಚ್ಛಕ್ತಿ ದರವನ್ನು ಸುಮಾರು 25 ಪರ್ಸೆಂಟ್‌ಯಿಂದ 43-45 ಪರ್ಸೆಂಟ್ ಹೆಚ್ಚಳ ಮಾಡಿರತಕ್ಕಂಥದ್ದು ಎಲ್ಲಾರಿಗೂ ಗೊತ್ತಿರತಕ್ಕಂಥ ವಿಷಯವೇ ಆಗಿದೆ. ಸುಮಾರು 3-4 ವರ್ಷಗಳಲ್ಲಿ ಅತಿ ಹೆಚ್ಚಿಸಿರುವುದು ಇದೇ ಮೊದಲ ಬಾರಿ. ಅದಕ್ಕಾಗಿ ಈ ವಿಷಯದ ಗಹನಡೆಯನ್ನು ತಿಳಿದುಕೊಂಡು ಈ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್

ಮಾಡಿ ತಾವು ನಿಲುವಳಿಯ ಸೂಚನೆಯ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಮ್ಮೆಲ್ಲರ ಅಭಿಪ್ರಾಯ. ಅದಕ್ಕಾಗಿ ತಮಗೆ ಮತ್ತೊಂದರೆಯನ್ನು ಕೊಡಬಾರದು, ತಾವು ಹೇಳಿದಂತೆ ಕೇಳಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದಲೇ ಮೊದಲೇ ತಮ್ಮ ಕೊಠಡಿಯಲ್ಲಿ ನಾವುಗಳು ಸೇರಿದಾಗ ಪ್ರಸ್ತಾಪ ಮಾಡಿದ್ದೇವೆ. ತಾವು ಸಹ ಇದಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ. ಅದುದರಿಂದ ಇದು ಏನು ಪ್ರತಿಷ್ಠೆಯನ್ನು ಮಾಡಿಕೊಳ್ಳುವಂತಹ ಪ್ರಶ್ನೆಯಿಲ್ಲ. ಮಾನ್ಯಮುಖ್ಯಮಂತ್ರಿಗಳಲ್ಲಿ ಈ ಬಗ್ಗೆ ಕಳಕಳಿಯಿಂದ ಕೇಳುವುದು ಏನೆಂದರೆ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡೋಣ, ಬಹುಶಃ ಈ ಸದನದವರು ಒಪ್ಪಿಕೊಂಡರೆ.

ಶ್ರೀ ಹೆಚ್.ಶಿವಪ್ಪ:- ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು:- ಶ್ರೀಹೆಚ್. ಶಿವಪ್ಪನವರೇ ತಾವುದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಪುನಃ ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುವುದು ಏನೆಂದರೆ, ಈ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ವಿದ್ಯುಚ್ಛಕ್ತಿಯ ದರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಏಕೆಂದರೆ ರಾಜ್ಯದಲ್ಲಿ ಸುಮಾರು 10 ಲಕ್ಷ ಪಂಪುಸೆಟ್‌ಗಳಿವೆ.

Mr.SPEAKER: You can take up all these matters afterwards.

SRI M.MALLIKARJUN KHARGE: Sir, this is very important. The question is the time factor.

ಅಧ್ಯಕ್ಷರು:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ ತಮ್ಮಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

I can understand my Hon'ble friends from BJP, who have never been in power in this State so farm they are asking for certain things. But you were a part of the establishmentm you were a Minister. Tell me on how many previous occasions when a similar situation arose, the question hour was supsended.

SRI. M. MALLIKHARJUNA KHARGE:- Many a times the question hour has ben suspended.

ತಾವು ಏನು ಹೇಳುತ್ತೀರಿ ಆ ರೀತಿಯಲ್ಲಿ ನಾವು ಕೇಳುತ್ತೇನೆ. ಆದರೆ ಪ್ರಶ್ನೋತ್ತರದ ವೇಳೆಯನ್ನು ಸಸ್ಪೆಂಡ್ ಆಗಿಲ್ಲ ಎಂದು ಹೇಳುವುದಕ್ಕೆ ಹೋಗಬೇಡಿ.

ಅಧ್ಯಕ್ಷರೇ:- ಪ್ರಶ್ನೋತ್ತರ ವೇಳೆ ಸಸ್ಪೆಂಡ್ ಆಗಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿರುವಂಥ ಸನ್ನಿವೇಶಗಳು ಹಾಗೆ ನಡೆದಿದೆ. ನಿಮ್ಮ ಹಕ್ಕನ್ನು ಪ್ರಶ್ನೆ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಆದರೆ ನಾನು ಮನವರಿಕೆ ಮಾಡಿಕೊಡುವ ವಿಷಯ. . . .

ಅಧ್ಯಕ್ಷರು:- ನಾನು ಹೇಳುವುದು ಏನೆಂದರೆ ತಾವು ಮುಖ್ಯಮಂತ್ರಿಗಳು ಒಪ್ಪಿಕೊಂಡರೆಎಂದು ಮುಖ್ಯಮಂತ್ರಿಗಳು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದಾರೆ. ನಾನು ಏನು ಹೇಳುತ್ತೇನೆ ಎಂದರೆ ತಮಗೂ, ಮಾನ್ಯ ಮುಖ್ಯಮಂತ್ರಿಗಳಿಗೂ ಈ ಸದನದಲ್ಲಿ ಸಲ್ಲಬೇಕಾದಂತಹ ಗೌರವವನ್ನು ಸೂಚಿಸುತ್ತಾ, ಅಧ್ಯಕ್ಷರಾದ ನನಗೂ ಒಂದು ವಿಶಿಷ್ಟವಾದಂತಹ ಜವಾಬ್ದಾರಿ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಇಲ್ಲ ಎಂದು ಹೇಳುವುದಿಲ್ಲ.

ಅಧ್ಯಕ್ಷರು:- ಯಾವ್ಯಾವ ಸದಸ್ಯರು ಪ್ರಶ್ನೆಗಳನ್ನು ಕಳುಹಿಸಿದ್ದಾರೆ ಅವರುಗಳಿಗೆ ಉತ್ತರ ಬಂದಿದೆ. ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಬಿಡಲೇ ಬೇಕು. ನಾನು ಅವರ ಹಕ್ಕನ್ನು ಮೊಟಕು ಮಾಡುವುದಕ್ಕೆ ಆಗುವುದಿಲ್ಲ. ಪ್ರಶ್ನೋತ್ತರವು ಆಗತ್ಯ ಇದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಯಾರ ಹಕ್ಕನ್ನು ಮೊಟಕು ಮಾಡಿ ಎಂದು ಹೇಳುವುದಿಲ್ಲ. ತಾವು ಬೇಕಾದರೆ ಇವತ್ತಿನ ಪ್ರಶ್ನೋತ್ತರವನ್ನು ನಾಳೆ ದಿವಸ ಬೇಕಾದರೆ ತೆಗೆದುಕೊಳ್ಳಿ. ಏಕೆಂದರೆ ನಾವು ತಂದಿರತಕ್ಕಂತಹ ನಿಲುವಳಿಯ ಸೂಚನೆಯ ವಿಷಯದ ಗಂಭೀರ್ಯವನ್ನು ತಿಳಿದುಕೊಂಡು ಬೇರೆ ಸದಸ್ಯರ ಹಕ್ಕುಗಳಿಗೆ ನಾವು ಚ್ಯುತಿ ಕೊಡದೇ ಪ್ರಶ್ನೋತ್ತರದ ವೇಳೆಯನ್ನು ಮುಂದೂಡಿ, ನಾಳೆ ತೆಗೆದುಕೊಳ್ಳಿ ಅಥವಾ ನಾಡಿದ್ದು ತೆಗೆದುಕೊಳ್ಳಿ ಇಲ್ಲ ಎಂದರೆ ಹೆಚ್ಚುವರಿಯಾಗಿ ತೆಗೆದುಕೊಳ್ಳಿ.

Mr. SPEAKER: I am not convinced that such an emergent situation has arisen.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಿಮ್ಮಂತವರಿಗೆ ಕನ್ವಿನ್ಸ್ ಆಗಲಿಲ್ಲ ಎಂದರೆ ಇನ್ನು ಮೇಲೆ ಇರತಕ್ಕಂತಹ ದೇವರಿಗೂ ಆಗುವುದಿಲ್ಲ. ಇನ್ನು ಯಾರು ಬರಬೇಕೋ ನನಗೆ ಗೊತ್ತಿಲ್ಲ.

Mr.SPEAKER: I am convinced about the seriousness.

Sri M.MALLIKHARJUNA KHARGE:- When there is 300 rupees enhancement to the farmers per HP, you are not convinced.

MR.SPEAKER: I am conviced about the seriousness of the matter that you are raising but I am not convinced about the emergent situation that has arisen in the House to suspend the question hour and take up this issue.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಏಕೆ ವಿದ್ಯುಚ್ಛಕ್ತಿಯ ಬಗ್ಗೆ ಮಾತನಾಡುತ್ತೇನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರ ಸಮುದಾಯ ಸಣ್ಣ ಪುಟ್ಟ ಉದ್ದಿಮೆದಾರರು, ದಿನ ಬಳಕೆಯ ಜನ ಎಲ್ಲಾರೂ ಕೂಡ ಈ ಸದನದಲ್ಲಿ ಏನು ನಡೆಯುತ್ತಿದೆಂದು ನೋಡುತ್ತಿದ್ದಾರೆ. ಇವತ್ತಿನ ದಿವಸ ಈ ಸದನದಲ್ಲಿ ವಿದ್ಯುಚ್ಛಕ್ತಿಯ ದರದ ಬಗ್ಗೆ ಚರ್ಚೆಗೆ ಬರುತ್ತದೆಯೋ ಇಲ್ಲವೋ, ಯಾವ ವಿಷಯಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಮಾತನಾಡುತ್ತಾರೆಂದು ಇವತ್ತು ಜನ ನೋಡುತ್ತಿದ್ದಾರೆ. ಹಾಗೆಯೇ ಈ ಜನ ಇದನ್ನು ನೋಡುತ್ತಿರುವಾಗ, ಜನರಿಗೆ ಇದರ ಬಗ್ಗೆ ಆಸಕ್ತಿ

ಇರುವಾಗ ರೈತರು ಕೂಡ ಕಳಕಳಿಯನ್ನು ಹೊಂದಿರುವಾಗ ನಾವು ಇದರ ಬಗ್ಗೆ ಆಸಕ್ತಿ ವಹಿಸಿ ಇದರ ಬಗ್ಗೆ ಪ್ರಾಮುಖ್ಯತೆಯನ್ನು ಕೊಡದಿದ್ದರೆ ಮತ್ತೆ ಇದರ ಬಗ್ಗೆ ಯಾರು ಆಸಕ್ತಿಯನ್ನು ಮಾಡಬೇಕು ? ಅದರಲ್ಲಿಯೂ ತಮ್ಮ ಜಿಲ್ಲೆಯಲ್ಲಿಯೇ 2- 3 ಲಕ್ಷ ಪಂಪುಸೆಟ್‌ಗಳಿವೆ. ಅದಕ್ಕೆ ದಯವಿಟ್ಟು ಈ ವಿಷಯ ಗಂಭೀರ್ಯತೆಯನ್ನು ತಿಳಿದುಕೊಂಡು ಮತ್ತು ತಮ್ಮಲ್ಲಿ ಕೈ ಜೋಡಿಸಿಕೊಂಡು ಮತ್ತೊಮ್ಮೆ ಕೇಳಿಕೊಳ್ಳುವುದು ಏನೆಂದರೆ ಇನ್ನಾದರೂ ಕನ್ವಿನ್ಸ್ ಮಾಡಿಕೊಳ್ಳಿ. 10 lakh agricultural families are suffering.

ಅಧ್ಯಕ್ಷರು:- ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕ್ಕೊಳ್ಳುತ್ತೇನೆ. ಈ ವಿಷಯದ ಗಾಂಭೀರ್ಯತೆ ಮತ್ತು ಪ್ರಾಮುಖ್ಯತೆಯನ್ನು ನಾನು ಅಲ್ಲಗೆಳೆಯುತ್ತಿಲ್ಲ. ನಾವು ಇದನ್ನು ಒಂದು ಗಂಟೆಯ ನಂತರ ಚರ್ಚೆಗೆ ತೆಗೆದುಕೊಳ್ಳುವುದರಿಂದ ಆಗುವಂಥ ಅನಾಹುತವಾದರೂ ಏನು ? ಅಂಥ ದೊಡ್ಡ ವ್ಯತ್ಯಾಸವೇನೂ ಆಗುವುದಿಲ್ಲ ಪ್ರಶ್ನೋತ್ತರವನ್ನು ರದ್ದು ಮಾಡಿ ಈ ವಿಚಾರವನ್ನು ತೆಗೆದುಕೊಳ್ಳುವಂಥ ಅಗತ್ಯ ಇಲ್ಲ ಎಂದು ಹೇಳಬಯಸುತ್ತೇನೆ. ತಾವು ದಯವಿಟ್ಟು ಸಹಕರಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್ ಮಾಡಿ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಂಡರೆ ಏನು ಮೇಸೆಜ್ ಜನರಿಗೆ ಹೋಗುತ್ತದೆಂದರೆ, ಸರ್ಕಾರ ಕೂಡ ರೈತರ ದೃಷ್ಟಿಯಿಂದ ಒಳ್ಳೆಯ ಭಾವನೆಯಿಂದ ಚರ್ಚೆ ಮಾಡುವುದಕ್ಕೆ ತಯಾರಿದ್ದಾರೆ. ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆಂಬ ಭಾವನೆ ಇರುತ್ತದೆ. ಈ ಪ್ರಶ್ನೋತ್ತರ ವೇಳೆಯನ್ನು ಮಧ್ಯಾಹ್ನ 3 ಗಂಟೆ ತೆಗೆದುಕೊಂಡರೂ ಅದರಿಂದ ಏನೂ ವ್ಯತ್ಯಾಸವಾಗುವುದಿಲ್ಲ. ಈಗ ನೀವು ಈ ನಿಲುವಳಿ ಸೂಚನೆಯ ಬಗ್ಗೆ ಚರ್ಚೆಗೆ ಅವಾಶ ಮಾಡಿಕೊಟ್ಟರೇ ಸರ್ಕಾರ ಕೂಡ ಇದರ ಬಗ್ಗೆ ವಿಚಾರ ಮಾಡುತ್ತದೆ. ಇದರಲ್ಲಿ ಪರಿಹಾರವನ್ನು ಕೊಡುವುದಕ್ಕೆ ಸಿದ್ಧವಾಗಿದೆ. ಇದರ ಬಗ್ಗೆ ಸರ್ಕಾರ ತಿಳುವಳಿಕೆಯನ್ನು ಪಡೆದುಕೊಳ್ಳುವುದಕ್ಕೆ ಸಿದ್ಧವಾಗಿದೆ. ಎನ್ನತಕ್ಕ ಒಂದು ಸಂದೇಶ ಜನರಿಗೆ ಹೋಗುತ್ತದೆ. ಆದರೆ ಆ ರೀತಿಯ ಸಂದೇಶವನ್ನು ಕೊಡಬಾರದೆಂಬುದು ನಿಮ್ಮ ಇಚ್ಛೆಯಾಗಿದ್ದರೆ ಅಥವಾ ಅದರ ಬಗ್ಗೆ ಹಠ ಹಿಡಿದುಕೊಂಡು ಮೊದಲು ಪ್ರಶ್ನೋತ್ತರ ವೇಳೆಯೇ ಆಗಲಿ, ನೋಡೋಣ, ಉತ್ತರವನ್ನು ಕೊಡೋಣ ಎನ್ನುವುದಾದರೆ ಅದು ಬೇರೆ ವಿಚಾರವಾಗುತ್ತದೆ. ಅವರು ಸಿದ್ಧವಾಗಿರುವಾಗ ತಾವು ಪ್ರಶ್ನೋತ್ತರ ವೇಳೆಯನ್ನು ರದ್ದು ಗೊಳಿಸಿ ಮಾನ್ಯಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದ್ದಾರೆ.

ಶ್ರೀ ಜೆ.ಹೆಚ್.ಪಾಟೀಲ್:- ತಾವು ಹಿರಿಯರು ಸದಸ್ಯರು. ಪ್ರಶ್ನೋತ್ತರ ವೇಳೆ ಪ್ರಾರಂಭ ಆದಮೇಲೆ ಯಾವಾಗಲಾದರೂ ಅದನ್ನು ಸಸ್ಪೆಂಡ್ ಮಾಡಿರತಕ್ಕದ್ದು ಇದೆಯೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಾಗೆ ಮಾಡಿದರೆ ಆಕಾಶವೇನೂ ಕಡಿದು ಬೀಳುವುದಿಲ್ಲ. ಮಧ್ಯಾಹ್ನ 3 ಗಂಟೆಗೆ ತೆಗೆದುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ತಮ್ಮ ಸೂಚನೆಯ ಪ್ರಕಾರ ಈಗಾಗಲೇ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಮತ್ತೊಮ್ಮೆ ತಮ್ಮಲ್ಲಿ

ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುವಂಥ ಶಕ್ತಿ ಕೂಡ ತಮಗಿದೆ. ಈ ಸದನ ಅಂಥ ಒಂದು ಶಕ್ತಿಯನ್ನು ತಮಗೆ ಕೊಟ್ಟಿದೆ. ಅದನ್ನು ಸದುಪಯೋಗ ಮಾಡಿಕೊಂಡು ಈ ದೇಶದ, ಈ ರಾಜ್ಯದ ರೈತರ ಹಿತದೃಷ್ಟಿಯಿಂದ, ವಿದ್ಯುಚ್ಛಕ್ತಿ ಬಳಕೆದಾರರ ಹಿತದೃಷ್ಟಿಯಿಂದ, ತಾವು ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರೆ :- ನನಗೆ ಇದೇನೂ ಪ್ರತಿಷ್ಠೆಯ ಪ್ರಶ್ನೆ ಅಲ್ಲ. ನಾನು ಇಷ್ಟೊಂದು ಕಳಕಳಿಯಿಂದ ವಿನಂತಿ ಮಾಡಿಕೊಂಡರೂ ಮಾನ್ಯ ವಿರೋಧ ಪಕ್ಷದ ಸದಸ್ಯರು ಏತಕ್ಕೆ ಅರ್ಥಮಾಡಿಕೊಳ್ಳುತ್ತಿಲ್ಲವೋ ಗೊತ್ತಿಲ್ಲ. ಎಂದು ಗಂಟೆಯ ನಂತರ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ ಅದಕ್ಕೆ ಮುಕ್ತ ಅವಕಾಶವನ್ನು ಕೊಡುತ್ತೇನೆಂದು ಹೇಳಿದರೂ. . . . .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆಗ ಅದರ ಪ್ರಾಮುಖ್ಯತೆ ಹೋಗಿಬಿಡುತ್ತದೆ. ಇಷ್ಟು ಹೊತ್ತಿಗೆ ಈ ವಿಚಾರ ಮುಗಿದುಹೋಗುತ್ತಿತ್ತು.

ಅಧ್ಯಕ್ಷರು:- ನನಗೆ ನೆನಪಿರುವಂತೆ ಈ ಸದಸನದಲ್ಲಿ ಪ್ರಶ್ನೋತ್ತರ ವೇಳೆಗೆ ಮುಂಚಿತವಾಗಿ ಬೇರೆ ಯಾವುದೇ ವಿಚಾರವನ್ನೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ಸಾಮಾನ್ಯವಾಗಿ ಅಧ್ಯಕ್ಷರಾದವರು ಪ್ರಶ್ನೋತ್ತರವನ್ನು ಪ್ರಾರಂಭಿಸಿ ಅದನ್ನು ಮುಗಿಸಿದ ನಂತರ ಬೇರೆ ವಿಚಾರದ ಚರ್ಚೆಗೆ ಅವಕಾಶ ಮಾಡಿಕೊಡುತ್ತಾರೆ. ಆದರೆ ಇವತ್ತು ಎಂಥ ವಿಚಿತ್ರ ಪರಿಸ್ಥಿತಿ ಬಂದಿದೆ ಎಂದರೆ ಪ್ರಶ್ನೋತ್ತರ ವೇಳೆ ಪ್ರಾರಂಭವಾಗಿ, ಸದಸ್ಯರು ಪ್ರಶ್ನೆಯನ್ನು ಕೇಳಿ, ಉತ್ತರವೂ ಬಂದಿದ್ದು ಉಪಪ್ರಶ್ನೆಯನ್ನು ಕೇಳುವಂಥ ಹಂತದಲ್ಲಿ ಈ ರೀತಿ ಆಗಿದೆ. ಇವತ್ತು ನಾನು ಮಾಡಿರತಕ್ಕದ್ದು ತಪ್ಪು ಎಂದು ನನ್ನ ಮನಸ್ಸಿಗೆ ಅನ್ನಿಸಿದೆ. ನಾನು ಇವತ್ತು ಒಂದು ಹೊಸ ಸಂಪ್ರದಾಯವನ್ನು ಹಾಕಿದಂತಾಗಿದೆ. I am guilty. I am confessing to the House, I am guilty of having committed a mistake today`

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಹೊಸ ಸಂಪ್ರದಾಯ ಏನೂ ಅಲ್ಲ. It is not like that. You will be doing a great service to the farmers of the State and the people by suspending the rules and allowing the discussion.

MR.SPEAKER: I might not claim any service to the farming community or to the society at large. But I am never guilty of doing any dis-service to the people` I am as much serious as all of you are. Please kindly understand my sentiments.

Today we have set up a new precedent in this House. The question Hour had commenced. The Hon'ble Member had put the question. The Hon'ble Minister had replied and when he was about

to put the supplementaries, again we have taken the House to a deviation. Listen to me. If anything that goes wrong from the Chair, only I will not be responsible., all of us will be collectively responsible for such things.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಮುಖ್ಯಮಂತ್ರಿಗಳು ಸಿದ್ಧವಾಗಿದ್ದಾರೆ. ತಾವು ಈ ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿದರೆ ಒಳ್ಳೆಯದಾಗುತ್ತದೆ.

MR.SPEAKER:- Please allow me to carry on with the questions. I don't want to take to the other course. That is the reason why I am appealing to you time and again.

SRI.M.MALLIKARJUNA KHARGE:- You can take any other course, Sir. I am ready to face it.

MR.SPEAKER:- I am not prepared to take it.

SRI.M.MALLIKARJUNA KHARGE:- If you are hurt so much, you can take any decision. I am prepared to face that.

MR.SPEAKER:- I have been taking a different line altogether. I want the Question Hour to go on. Please cooperate with me. This is my appeal to you.

SRI.M.MALLIKARJUNA KHARGE:- Once again I beg you to allow for discussion because of the importance of that issue. ಬೇರೆ ಇನ್ನೇನನ್ನೂ ನಾವು ಕೇಳುತ್ತಿಲ್ಲ. ಆ ವಿಷಯದ ಗಾಂಭೀರ್ಯತೆ ಮತ್ತು ಪ್ರಾಮುಖ್ಯತೆಯ ಬಗ್ಗೆ ನಾವು.ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆಯೇ ಹೊರತು, ನಾವು ಹಠ ಹಿಡಿದು ಇದು ಆಗಲೇಬೇಕೆಂದು ಏನೂ ಕೇಳುತ್ತಿಲ್ಲ.

MR.SPEAKER:- Let me reiterate with all the authority under my commmand that I have not undermined the importance of this subject and it does not make much of a difference taking up the subject for discussion in the House either now or an hour later. Therefore, I am once again appealing to you. You are a very senior member. You have been in this House right from 1972. You are a distinguished Member of this House. You have been a Minister. You have been in the Opposition. Please kindly understand and cooperat with me.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಆ ಎಲ್ಲ ಕಾನೂನುಗಳು ಗೊತ್ತಿದ್ದರೂ ಕೂಡ ಈ

ಸದನದಲ್ಲಿ ಇಂಥ ಅನೇಕ ಗಂಭೀರವಾದ ವಿಚಾರಗಳು ಬಂದಾಗ ಅವುಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದಾಗ ರೂಲ್ಸ್‌ನ್ನು ಸಸ್ಪೆಂಡ್ ಮಾಡಿ ತೆಗೆದುಕೊಂಡಿರತಕ್ಕಂತಂಥ ಅನೇಕ ಉದಾಹರಣೆಗಳಿವೆ. ಇದನ್ನು ಆ ದೃಷ್ಟಿಯಲ್ಲಿಟ್ಟುಕೊಂಡು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಬಿಸಿನೆಸ್ ಟ್ರಾನ್ಸ್‌ಾಕ್ಷನ್ ರೂಲ್ಸ್ ಪ್ರಕಾರ ತಮಗೆ ಅಧಿಕಾರ ಇದೆ; ತಾವು ಚರ್ಚೆಗೆ ಅವಕಾಶ ಮಾಡಿಕೊಡಿ, ಅವರೂ ಕೂಡ ಒಪ್ಪುತ್ತಾರೆ.

ಅಧ್ಯಕ್ಷರು:- ನಾನು ಸಾಕಷ್ಟು ಸಾರಿ ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ಉಪ ಪ್ರಶ್ನೆಯನ್ನು ಕೇಳುವ ಹಕ್ಕು ಮಾನ್ಯ ಸದಸ್ಯರಿಗೆ ಇತ್ತು. ದಯವಿಟ್ಟು ತಾವು ಕುಳಿತುಕೊಳ್ಳಿ. Let me complete the Question Hour.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈ ರೀತಿ ತಾವು ಮಾಡುವುದಾದರೆ ನಮಗೆ ಬೇರೆ ದಾರಿ ಇಲ್ಲದೆ ಇಲ್ಲಿ ಧರಣಿ ಕೂರಬೇಕಾಗುತ್ತದೆ. ಇಲ್ಲೇ ಕುಳಿತುಕೊಳ್ಳುತ್ತೇವೆ. ನಮ್ಮದು ಬೇರೆ ಪ್ರಶ್ನೆಯೇ ಇಲ್ಲ.

(ಈ ಹಂತದಲ್ಲಿ ಮಾನ್ಯ ಎಂ.ಮಲ್ಲಿಕಾರ್ಜುನ ಖರ್ಗೆ, ಟಿ.ಬಿ.ಜಯಚಂದ್ರ, ಸಗೀರ್ ಅಹಮದ್, ಮಂಜುನಾಥ.ಸಿ.ಕುನ್ನೂರು ಜಾಸ್.ಶಿವನಂಜಪ್ಪ, ಎ.ಟಿ.ರಾಮಸ್ವಾಮಿ, ಇನ್ನೂ ಹಲವರು ಮಾನ್ಯ ಸಭಾಧ್ಯಕ್ಷರ ಪೀಠದ ಮುಂದಿರುವ ಆವರಣದಲ್ಲಿ ಬಂದು ಧರಣಿ ಕುಳಿತರು.)

ಅಧ್ಯಕ್ಷರು:- ಈಗ ಪ್ರಶ್ನೋತ್ತರ.

(ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆ ಅಭಿವೃದ್ಧಿ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1(81)

ಶ್ರೀ ಯು.ಆರ್.ಸಭಾಪತಿ (ಉಡುಪಿ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ...

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994-95, 1995-96 ಮೇ, 1996 ಅಂತ್ಯದವರೆಗೆ ಸಂಗ್ರಹವಾದ ರಸ್ತೆ ತೆರಿಗೆ ಎಷ್ಟು?

ಆ) ಸಂಗ್ರಹಿಸಿದ ತೆರಿಗೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರಿಗೆ ವ್ಯವಸ್ಥೆ ಅಭಿವೃದ್ಧಿಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):-

1994-95 ರೂ.2416.81 ಲಕ್ಷಗಳು
1995-96 ರೂ.4296.95 ''
1996 ಏಪ್ರಿಲ್ ರೂ.304.88 ''
1996 ಮೇ ರೂ.266.67 ''
ಒಟ್ಟು ರೂ.7284.31 ಲಕ್ಷಗಳು